ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್

Editor : Sundar

ಏಕ ಕಾಲಕ್ಕೆ
ಬಳ್ಳಾರಿ,
ಕೊಪ್ಪಳ,
ಯಾದಗಿರಿ,
ರಾಯಚೂರು,
ಕಲಬುರ್ಗಿ,
ಬೀದರ,
ವಿಜಯನಗರ
ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 231 RNI Number : KNKAN/25/A2770 01-09-2026 Tuesday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :231 ರಾಯಚೂರು 01-09-2026 ಮಂಗಳವಾರ ಪುಟ 04 ಬೆಲೆ ರೂ.2/- ಮೊ:8660146563

ಇಸ್ಲಾಂ ಧರ್ಮ ಒಂದು ಶ್ರೇಷ್ಠ ಧರ್ಮ-ಸಚಿವ ಬಸವರಾಜ ರಾಯರೆಡ್ಡಿ

ಕೊಪ್ಪಳ, ಆ.31

ಕರ್ನಾಟಕ ಉನ್ನತ ಶಿಕ್ಷಣ ಸಚಿವ ಬಸವರಾಜ ರಾಯರೆಡ್ಡಿ ಮುಸ್ಲಿಂ ಸಮುದಾಯದ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಮಾತನಾಡುತ್ತಾ, ಇತರ ಧರ್ಮಗಳಿಗೆ ಹೋಲಿಸಿದರೆ ಇಸ್ಲಾಂ ಶ್ರೇಷ್ಠ ಧರ್ಮ ಅಥವಾ ಶ್ರೇಷ್ಠ ಧರ್ಮ ಎಂದು ಹೇಳಿದರು. ಅವರು ಮೆಕ್ಕಾಗೆ ಭೇಟಿ ನೀಡಲು ಬಯಸಿದ್ದರು, ಆದರೆ ಮುಸ್ಲಿಮೇತರರಾಗಿ ಹಾಗೆ ಮಾಡಲು ಸಾಧ್ಯವಾಗಲಿಲ್ಲ ಎಂದು ಹೇಳಿದರು.

ಕೊಪ್ಪಳ ಜಿಲ್ಲೆಯ ಕುಕನೂರ್ ಪಟ್ಟಣದಲ್ಲಿ ಮಾತನಾಡಿದ ರಾಯರೆಡ್ಡಿ, ಇಸ್ಲಾಂ ಅನ್ನು ಶ್ರೇಷ್ಠ ಮತ್ತು ಅತ್ಯಂತ ಮಾನವೀಯ ಧರ್ಮ



ವೆಂದು ಬಣ್ಣಿಸಿದರು.

ಧರ್ಮವು ವಿಜ್ಞಾನವನ್ನು ಆಧರಿಸಿದೆ ಮತ್ತು ಜನರು ಹೇಗೆ ಬದುಕಬೇಕೆಂದು ಕಲಿಸುತ್ತದೆ ಎಂದು ಅವರು ಹೇಳಿದರು.

ಇಸ್ಲಾಂ ಬಗ್ಗೆ ಏನೂ ತಿಳಿದಿಲ್ಲದವರು ತಪ್ಪು ಊಹೆಗಳನ್ನು ಮಾಡುತ್ತಾರೆ ಮತ್ತು ಅದರ ಬಗ್ಗೆ ತಪ್ಪು ಅಭಿಪ್ರಾಯಗಳನ್ನು ರೂಪಿಸುತ್ತಾರೆ. ಇಸ್ಲಾಂ ಇತರ ಎಲ್ಲಾ ಧರ್ಮಗಳಿಗಿಂತ ಶ್ರೇಷ್ಠವಾಗಿದೆ ಎಂದು ನಾನು ಹೇಳಲು ಬಯಸುತ್ತೇನೆ ಏಕೆಂದರೆ ಅದು ಮಾನವೀಯತೆಯಿಂದ ಪ್ರಾರಂಭವಾಗುತ್ತದೆ ಎಂದು ಸಚಿವರು ಹೇಳಿದರು.

ನೋಡಿ, ಕುರಾನ್ ಬಗ್ಗೆ, ನಾನು ಅಬ್ರಹಾಮಿಕ್ ಧರ್ಮಗಳ ಬಗ್ಗೆ ವ್ಯಾಪಕ ಅಧ್ಯಯನ ಮಾಡಿಲ್ಲ, ಮತ್ತು ನಾನು ಆಗಾಗ್ಗೆ ದೇವಾಲಯಗಳು ಅಥವಾ ಮಠಗಳಿಗೆ (ಮಠಗಳಿಗೆ) ಭೇಟಿ ನೀಡುವುದಿಲ್ಲ, ನಾನು ಧರ್ಮಗಳು ಮತ್ತು ವಿಭಿನ್ನ ಇತಿಹಾಸಗಳನ್ನು ಅಧ್ಯಯನ ಮಾಡುತ್ತೇನೆ. ಅದಕ್ಕಾಗಿಯೇ ನಾನು ಅಬ್ರಹಾಮಿಕ್ ಧರ್ಮಗಳನ್ನು ನೋಡುತ್ತೇನೆ ಎಂದು ಅವರು ಹೇಳಿದರು.ಜಜಈ ಹೇಳಿಕೆಗೆ ಬಿಜೆಪಿ ನಾಯಕ ಮತ್ತು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್. ಅಶೋಕ್ ತೀಕ್ಷ್ಣ ಪ್ರತಿಕ್ರಿಯೆ ನೀಡಿದ್ದು, ಸಚಿವರು ಸನಾತನ ಧರ್ಮವನ್ನು ಕೀಳು ಮಟ್ಟದಲ್ಲಿ ತೋರಿಸಿದ್ದಾರೆ ಎಂದು ಹೇಳಿದ್ದಾರೆ. ರಾಯರೆಡ್ಡಿ ಅವರು ತಮ್ಮ ಹೇಳಿಕೆಗಳನ್ನು ಹಿಂಪಡೆದು ಕ್ಷಮೆಯಾಚಿಸಬೇಕು ಮತ್ತು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಹಾಗೆ ಮಾಡದಿದ್ದರೆ ಅವ ರನ್ನು ಸಂಪುಟದಿಂದ ತೆಗೆದುಹಾಕ ಬೇಕು ಎಂದು ಅವರು ಹೇಳಿದರು.

ಸಚಿವರು ಮತ್ತು ಕಾಂಗ್ರೆಸ್ ಸರ್ಕಾರ ತಮ್ಮ ಮತದಾರರನ್ನು ಸಮಾಧಾನಪಡಿಸಲು ಪ್ರಯತ್ನಿಸುತ್ತಿದೆ ಎಂದು ಬಿಜೆಪಿ ವಕ್ತಾರ ಅಶೋಕ್ ಗೌಡ ಆರೋಪಿಸಿದರು.

ಕರ್ನಾಟಕ ಬಿಜೆಪಿ ಮುಖ್ಯಸ್ಥ ಆರ್. ಅಶೋಕ್ ಅವರು ಈ ಹೇಳಿಕೆಗಳ ಬಗ್ಗೆ ಮುಖ್ಯಮಂತ್ರಿಯಿಂದ ಉತ್ತರಗಳನ್ನು ಕೋರಿದರು. ಸಚಿವರ ಹೇಳಿಕೆಗಳು ಹಿಂದೂ ಧರ್ಮವನ್ನು ಅವಮಾನಿಸಿವೆ ಎಂದು ಅವರು ಕಂಡುಕೊಂಡರು.

ಪರೀಕ್ಷೆಯಲ್ಲಿನ ಅಕ್ರಮ: ಜ್ಞಾನೇಂದ್ರ ಕುಮಾರ್ ವಶಕ್ಕೆ

ಬೆಂಗಳೂರು, ಆ.31-

ಕರ್ನಾಟಕ ಐಎಎಸ್ ಅಧಿಕಾರಿ ಜ್ಞಾನೇಂದ್ರ ಕುಮಾರ್ ಗಂಗ್ವಾರ್ ಅವರನ್ನು ಕರ್ನಾಟಕ ಸಾರ್ವಜನಿಕ ಸೇವಾ ಆಯೋಗ (ಕೆಪಿಎಸ್‌ಸಿ) ನಡೆಸಿದ ಪಶುವೈದ್ಯಕೀಯ ಅಧಿಕಾರಿಗಳ ಪರೀಕ್ಷೆಯಲ್ಲಿನ ಅಕ್ರಮಗಳಿಗೆ ಸಂಬಂಧಿಸಿದಂತೆ ವಶಕ್ಕೆ ಪಡೆಯಲಾಗಿದೆ.



2016 ರ ಬ್ಯಾಚ್‌ನ ಭಾರತೀಯ ಆಡಳಿತ ಸೇವೆ (ಐಎಎಸ್) ಅಧಿಕಾರಿಯಾಗಿರುವ ಗಂಗ್ವಾರ್ ಅವರನ್ನು ಶನಿವಾರ ಸತತ ಎರಡನೇ ದಿನವೂ ವಿಚಾರಣೆ ನಡೆಸಿದ ನಂತರ ಬಂಧಿಸಲಾಯಿತು. ವಿಚಾರಣೆಯ ಸಮಯದಲ್ಲಿ ಅವರು ಸಹಕರಿಸಲು ವಿಫಲರಾದ ಕಾರಣ ಅವರನ್ನು ಬಂಧಿಸಲಾಯಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅವರನ್ನು ಶುಕ್ರವಾರ ಸುಮಾರು ಒಂಬತ್ತು ಗಂಟೆಗಳ ಕಾಲ ಸಿಐಡಿ ತಂಡ ವಿಚಾರಣೆಗೆ ಒಳಪಡಿಸಿತು.

ಪ್ರಸ್ತುತ ಕರ್ನಾಟಕ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯಲ್ಲಿ ಎಂಎಸ್‌ಎಂಇ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿರುವ ಗಂಗ್ವಾರ್ ಅಕ್ರಮಗಳು ಸಂಭವಿಸಿದಾಗ ಕೆಪಿಎಸ್‌ಸಿಯಲ್ಲಿ ಪರೀಕ್ಷಾ ನಿಯಂತ್ರಕರಾಗಿ ಸೇವೆ ಸಲ್ಲಿಸುತ್ತಿದ್ದರು.

ಈ ವರ್ಷದ ಮಾರ್ಚ್‌ನಲ್ಲಿ ಅವರನ್ನು ಬದಲಾಯಿಸಲಾಯಿತು.

ಆಗಸ್ಟ್ 23 ರಂದು, ಕೆಪಿಎಸ್‌ಸಿ ನಡೆಸಿದ ಪರೀಕ್ಷೆಯಲ್ಲಿನ ಅಕ್ರಮಗಳಿಗೆ ಸಂಬಂಧಿಸಿದ ಹಣ ವರ್ಗಾವಣೆ ತನಿಖೆಗೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯವು ಬೆಂಗಳೂರು ಮತ್ತು ಬರೇಲಿಯಲ್ಲಿರುವ ಅವರ ನಿವಾಸಗಳ ಮೇಲೆ ದಾಳಿ ನಡೆಸಿತ್ತು.

ಸಚಿವ ಅಜಯ್ ಸಿಂಗ್, ಎನ್.ಎಸ್. ಬೋಸರಾಜು, ಸಂಸದ ಕುಮಾರನಾಯಕ, ಶಾಸಕ ಹಂಪಯ್ಯ ನಾಯಕರಿಂದ ಹೊಕ್ರಾಣಿಯ ಅಶ್ವಿನಿ ಕುಟುಂಬಕ್ಕೆ ಸಾಂತ್ವನ

ಸಿರವಾರ.ಅ.31-

ಹೊಕ್ರಾಣಿ ಗ್ರಾಮದ ಅಶ್ವಿನಿ ಅವರ ಮೇಲಿನ ಅತ್ಯಾಚಾರ ಹಾಗೂ ಕೊಲೆ ಪ್ರಕರಣ ಅತ್ಯಂತ ನೋವಿನ ಸಂಗತಿಯಾಗಿದೆ. ಪ್ರಕರಣದಲ್ಲಿ ತಪ್ಪಿತಸ್ಥರು ಯಾರೇ ಆಗಿದ್ದರೂ ಕಾನೂನಿನಡಿ ಕಠಿಣ ಶಿಕ್ಷೆಗೆ ಗುರಿಪಡಿಸಲಾಗುವುದು. ಸರ್ಕಾರ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ್ದು, ನಿಷ್ಪಕ್ಷಪಾತ ಹಾಗೂ ಸಮಗ್ರ ತನಿಖೆ ನಡೆಸುತ್ತಿದೆ. ಕುಟುಂಬಸ್ಥರು ಆತಂಕಪಡುವ ಅಗತ್ಯವಿಲ್ಲ. ಅಶ್ವಿನಿ ಕುಟುಂಬ ಹಾಗೂ ಜಿಲ್ಲೆಯಲ್ಲಿ ಜರುಗಿರುವ ಇತ್ತರೆ ಪ್ರಕರಣಗಳಿಗೆ ನ್ಯಾಯ ದೊರಕಿಸುವ ನಿಟ್ಟಿನಲ್ಲಿ ಸರ್ಕಾರ



ಪ್ರಾಮಾಣಿಕವಾಗಿ ಪ್ರಯತ್ನಿಸಲಿದೆ, ಎಂದು ಜಿಲ್ಲಾ ಉಸ್ತುವಾರಿ ಸಚಿವ ಅಜಯ್ ಸಿಂಗ್ ಭರವಸೆ ನೀಡಿದರು.

ತಾಲ್ಲೂಕಿನ ಹೊಕ್ರಾಣಿ ಗ್ರಾಮದಲ್ಲಿರುವ ಅಶ್ವಿನಿ ಅವರ ಮನೆಗೆ ಸೋಮವಾರ ಜಿಲ್ಲಾ ಉಸ್ತುವಾರಿ ಸಚಿವರಾದ ಅಜಯ್ ಸಿಂಗ್, ಮಾಜಿ ಸಚಿವ ಎನ್.ಎಸ್. ಬೋಸರಾಜು, ಸಂಸದ ಜಿ. ಕುಮಾರನಾಯಕ ಹಾಗೂ ಶಾಸಕ ಹಂಪಯ್ಯ ನಾಯಕ ಅವರೊಂದಿಗೆ ಭೇಟಿ ನೀಡಿ ಕುಟುಂಬಸ್ಥರ ಅಳಲು ಆಲಿಸಿ ಸಾಂತ್ವಾನ ಹೇಳಿದ ಅವರು ನಂತರ ಧರಣಿ ನಿರತ ಹೋರಾಟಗಾರರ ಬಳಿ ಆಗಮಿಸಿದ ಸಚಿವರು ಹಾಗೂ ಮುಖಂಡರು, ಪ್ರಕರಣದ ತನಿಖೆಯ ಪ್ರಗತಿ ಮತ್ತು ಕುಟುಂಬಕ್ಕೆ ಸರ್ಕಾರದಿಂದ ದೊರೆಯಬೇಕಾದ ನೆರವಿನ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದರು. ಕುಟುಂಬಕ್ಕೆ ಅಗತ್ಯ ನೆರವು ಹಾಗೂ ಭದ್ರತೆ ಒದಗಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು. ಈ ಘಟನೆ ಜರುಗಿದ ಎರಡೇ ದಿನದಲ್ಲಿ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ, ಗೃಹ ಸಚಿವರು, ಸಮಾಜ ಕಲ್ಯಾಣ ಇಲಾಖೆಯ ಸಚಿವರ ಗಮನಕ್ಕೆ ತಂದು ಜಿಲ್ಲಾ ನಿಯೋಗವನ್ನು ಭೇಟಿ ಮಾಡಿಸಿ ಘಟನೆ ಕುರಿತು ತಿಳಿಸಲಾಗಿದೆ. ನಿಮ್ಮ ಬೇಡಿಕೆಯನ್ನು ಅವರಿಗೆ ಮತ್ತೊಮ್ಮೆ ತಿಳಿಸಲಾಗುವುದು. ಈಗಾಗಲೇ ಎಲ್ಲಾ ಅಧಿಕಾರಿಗಳು ಸ್ಥಳಕ್ಕೆ ಆಗಮಿಸಿ ವರದಿ ಪಡೆದಿದ್ದಾರೆ. ರಾಣೆಮ್ಮ, ಭೂಮಾನಂದ ಪ್ರಕರಣಗಳನ್ನು ನೀವು ತಿಳಿಸಿದ ಹಾಗೆ ತನ್ನಿಖೆ ಮಾಡಿಸಿ, ಮುಂದೆ ಸೂಕ್ತ ಪರಿಹಾರ, ತಪ್ಪಿತಸ್ಥರಿಗೆ ಶಿಕ್ಷೆಯಾಗುತ್ತದೆ. ಹೋರಾಟ ಕೈ ಬಿಡಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಮಾಜಿ ಸಚಿವ ಎನ್.ಎಸ್. ಬೋಸರಾಜು, ನಮ್ಮ

3 ನೇ ಪುಟಕ್ಕೆ

ದರ್ವೇಶ್ ಗ್ರೂಪ್ ಕಂಪನಿಯಲ್ಲಿ ಹೂಡಿಕೆ ಹಣ ಮರು ಪಾವತಿಗೆ ಆಗ್ರಹಿಸಿ ಸೆ.1 ರಂದು ಶಾಂತಿಯುತ ಪಾದಯಾತ್ರೆ

ರಾಯಚೂರು,ಆ.31-

ದರ್ವೇಶ್ ಗ್ರೂಪ್ ಕಂಪನಿಯಲ್ಲಿ ಹೂಡಿಕೆ ಮಾಡಿ ಹಣ ಮರಳಿ ಪಡೆಯಲು ಕಾಯುತ್ತಿರುವ ಸಾವಿರಾರು ಹೂಡಿಕೆದಾರರಿಗೆ ನ್ಯಾಯ ಒದಗಿಸಬೇಕು ಹಾಗೂ ಅವರ ಕಷ್ಟಪಟ್ಟು ಸಂಪಾದಿಸಿದ ಹಣವನ್ನು ಕಾನೂನುಬದ್ಧ ರೀತಿಯಲ್ಲಿ ಮರು ಪಾವತಿಸಲು ಪರಿಣಾಮಕಾರಿ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ಸೆಪ್ಟೆಂಬರ್ 1 ರಂದು ರಾಯಚೂರು ನಗರದಲ್ಲಿ ಶಾಂತಿಯುತ ಪಾದಯಾತ್ರೆ ನಡೆಸಿ, ಬಳಿಕ ಟಿಪ್ಪು ಸುಲ್ತಾನ್ ಉದ್ಯಾನವನದಲ್ಲಿ ಅನಿರ್ದಿಷ್ಟಾವಧಿ ಧರಣಿ ಆರಂಭಿಸಲಾಗುವುದು ಎಂದು ದರ್ವೇಶ್ ಕಂಪನಿಯ ಹೂಡಿಕೆದಾರರ ಹಿತಾಸಕ್ತಿ



ವೇದಿಕೆ ಸಂಚಾಲಕ ಅಂಬಾಜಿ ರಾವ ತಿಳಿಸಿದರು.

ನಗರದ ಪತ್ರಿಕಾ ಭವನದಲ್ಲಿ ನಡೆದ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಅವರು, ದರ್ವೇಶ್ ಗ್ರೂಪ್ ಕಂಪನಿಯಲ್ಲಿ ತಮ್ಮ ಜೀವನದ ಉಳಿತಾಯ, ಕಷ್ಟಪಟ್ಟು ಸಂಪಾದಿಸಿದ ಹಣ ಹಾಗೂ ಭವಿಷ್ಯದ ಭದ್ರತೆಗಾಗಿ ನಂಬಿಕೆಯಿಟ್ಟು ಸಾವಿರಾರು ಜನರು ಹಣ ಹೂಡಿಕೆ ಮಾಡಿದ್ದಾರೆ. ಆದರೆ ಕಳೆದ ಸುಮಾರು ಎರಡೂವರೆ ವರ್ಷಗಳಿಂದ ತಮ್ಮ ಹಣ ಮರಳಿ ಸಿಗದೆ ಹೂಡಿಕೆದಾರರು ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದರು. ಹಣ ಮರುಪಾವತಿಯಾಗದ ಕಾರಣ ಅನೇಕ ಕುಟುಂಬಗಳು ತೀವ್ರ ಆರ್ಥಿಕ ಸಂಕಷ್ಟ ಎದುರಿಸುತ್ತಿವೆ. ಇದು ಕೇವಲ ಹಣದ ಸಮಸ್ಯೆಯಲ್ಲ; ಸಾವಿರಾರು ಕುಟುಂಬಗಳ ಬದುಕು, ಮಕ್ಕಳ ಶಿಕ್ಷಣ, ಭವಿಷ್ಯ ಮತ್ತು

3 ನೇ ಪುಟಕ್ಕೆ

ಹೊಕ್ರಾಣಿ ಗ್ರಾಮಕ್ಕೆ ಜಿಲ್ಲಾ ಉಸ್ತುವಾರಿ ಸಚಿವರ ಭೇಟಿ

ಕುಟುಂಬಕ್ಕೆ ಶೀಘ್ರ ನ್ಯಾಯ ಒದಗಿಸಲಾಗುವುದು: ಸಚಿವ ಡಾ.ಅಜಯ್ ಧರ್ಮಸಿಂಗ್

ರಾಯಚೂರು,ಆ.31-

ಸಿರವಾರ ತಾಲೂಕಿನ ಹೊಕ್ರಾಣಿ ಗ್ರಾಮದಲ್ಲಿ ಇತ್ತೀಚೆಗೆ ಮೃತ ಕು.ಅಶ್ವಿನಿ ಎಂಬುವವರನ್ನು ದುಷ್ಕರ್ಮಿಗಳು ಅತ್ಯಾಚಾರ ಮಾಡಿ ಕೊಲೆಗೈದ ಮೃತಳ ಮನೆಗೆ ಆಗಸ್ಟ್ 31ರ ಸೋಮವಾರ ದಂದು ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ರಾಯಚೂರು ಜಿಲಾ ಉಸ್ತುವಾರಿ ಸಚಿವರಾದ ಡಾ. ಅಜಯ್ ಧರ್ಮಸಿಂಗ್ ಅವರು ಭೇಟಿ ನೀಡಿ, ಕುಟುಂಬಕ್ಕೆ ಸಾಂತ್ವನ ಹೇಳಿ ಧೈರ್ಯ ತುಂಬುವುದರ ಜೊತೆಗೆ ಅವರಿಗೆ ವೈಯಕ್ತಿಕ ಧನ ಸಹಾಯವನ್ನು ಮಾಡಿ ಕುಟುಂಬದವರಿಂದ ಮಾಹಿತಿ ಪಡೆದರು. ಮೃತ ಅಶ್ವಿನಿ ಸಹೋದರನಿಂದ



ಮಾಹಿತಿ ಪಡೆದರು. ನಂತರ ಸಹೋದರಿ ಮಾತನಾಡಿ, ಗ್ರಾಮದಲ್ಲಿ ಮಹಿಳೆಯರಿಗೆ ಸರಿಯಾದ ಗೌರವ ವಿಲ್ಲ. ದೌರ್ಜನ್ಯಗಳು ಹೆಚ್ಚಾಗಿವೆ. ನಮ್ಮಂತವರಿಗೆ ಸೂಕ್ತ ಭದ್ರತೆ ಹಾಗೂ ಸ್ಥಾನಮಾನವನ್ನು ಒದಗಿಸಬೇಕು. ಅಲ್ಲದೆ ಗೌರವದಿಂದ ಜೀವನ ನಡೆಸಲು ಅನುಕೂಲ ಮಾಡಿಕೊಡಬೇಕೆಂದು ಸಚಿವರ ಮುಂದೆ ತಮ್ಮ ನೋವನ್ನು ಹೊರಹಾಕಿದರು.

ಪ್ರತಿಭಟನೆ ಸ್ಥಳಕ್ಕೆ ಸಚಿವರು ಭೇಟಿ: ಕುಮಾರಿ ಅಶ್ವಿನಿ ತಮ್ಮಾರೆಡ್ಡಿ, ಭೂಮಾನಂದ, ರಾಣಿಮ್ಮ ಅತ್ಯಾಚಾರ- ಕಗ್ಗೊಲೆ ದೌರ್ಜನ್ಯ ವಿರೋಧಿ ಸಂಘಟನೆಗಳ ಒಕ್ಕೂಟ ರಾಯಚೂರು ವತಿಯಿಂದ ಹೊಕ್ರಾಣಿ ಗ್ರಾಮದಲ್ಲಿ ಹಮ್ಮಿಕೊಳ್ಳಲಾಗಿದ್ದ ಪ್ರತಿಭಟನೆ ಸ್ಥಳಕ್ಕೆ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ರಾಯಚೂರು ಜಿಲಾ ಉಸ್ತುವಾರಿ ಸಚಿವರಾದ ಡಾ. ಅಜಯ್ ಧರ್ಮಸಿಂಗ್ ಸೇರಿದಂತೆ ವಿವಿಧ ಗಣ್ಯರು ಭೇಟಿ ನೀಡಿ ಅಹವಾಲು ಸ್ವೀಕರಿಸಿದರು.

ಈ ವೇಳೆ ಸಚಿವರಾದ ಡಾ. ಅಜಯ್ ಧರ್ಮಸಿಂಗ್ ಅವರು ಮಾತನಾಡಿ, ಜಿಲ್ಲೆಯಲ್ಲಿ ಇತ್ತೀಚೆಗೆ ನಡೆದ ಕ್ರೂರ ಹಾಗೂ ಅಮಾನವೀಯ ಘಟನೆಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದ್ದು, ನೊಂದ ಕುಟುಂಬಕ್ಕೆ

3 ನೇ ಪುಟಕ್ಕೆ

ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮಕ್ಕೆ ಸಚಿವರ ಸೂಚನೆ

ರಾಯಚೂರು,ಆ.31-

ಜಿಲ್ಲೆಯಲ್ಲಿ ಕಳೆದ ಒಂದು ತಿಂಗಳ ಅವಧಿಯಲ್ಲಿ ಈ ಘಟನೆಗಳು ನಡೆದಿದ್ದು. ಇದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆ. ಈ ಸಂಬಂಧ ಮಾನ್ಯ ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳು ಹಾಗೂ ಗೃಹ ಸಚಿವರ ಗಮನಕ್ಕೆ ತರಲಾಗಿದ್ದು, ಸಂತ್ರಸ್ತ ನಿಯೋಗದೊಂದಿಗೆ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಸಮಾಲೋಚನೆ ನಡೆಸಲಾಗಿದೆ. ಅಲ್ಲದೆ ಪ್ರಕರಣವನ್ನು ಕಟ್ಟುನಿಟ್ಟಾಗಿ ನಡೆಸಬೇಕು ಎಂದು ಜಿಲ್ಲಾಡಳಿತ ಹಾಗೂ ಪೊಲೀಸ ಇಲಾಖೆಗೆ ಸೂಚನೆ ನೀಡಲಾಗಿದೆ ಎಂದು ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ರಾಯಚೂರು



ಜಿಲಾ ಉಸ್ತುವಾರಿ ಸಚಿವರಾದ ಡಾ. ಅಜಯ್ ಧರ್ಮಸಿಂಗ್ ಅವರು ಹೇಳಿದರು.

ಆಗಸ್ಟ್ 31ರ ಸೋಮವಾರ ದಂದು ಜಿಲ್ಲೆಯ ಹೋಕ್ರಾಣಿ ಗ್ರಾಮದಲ್ಲಿ ಮೃತ ಕು.ಅಶ್ವಿನಿ ಅವರ ಮನೆಗೆ ಭೇಟಿ ನೀಡಿ ನಂತರ ಮಾಧ್ಯಮದವರೊಂದಿಗೆ ಮಾಹಿತಿ ನೀಡಿ ಮಾತನಾಡಿದರು.

ಘಟನೆಗೆ ಸಂಬಂಧಿಸಿದಂತೆ ರಾಯಚೂರು ಜಿಲ್ಲೆಯ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ. ಮುಂಬರುವ ದಿನಗಳಲ್ಲಿ ಜಿಲ್ಲೆಯಲ್ಲಿ ಇಂತಹ ಯಾವುದೇ ಅಹಿತಕರ ಘಟನೆಗಳು ಮರುಕಳಿಸದಂತೆ ಮುನ್ನೆಚ್ಚರಿಕೆ ವಹಿಸಲು ಮತ್ತು ತಾಲೂಕು ಹಾಗೂ ಹೋಬಳಿ ಮಟ್ಟದಲ್ಲಿ ವ್ಯಾಪಕ ಸಭೆಗಳನ್ನು ನಡೆಸಿ ಶಾಂತಿ-ಸುವ್ಯವಸ್ಥೆ ಕಾಪಾಡಲು ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ ಎಂದರು.

ಜಿಲ್ಲೆಯಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸಲು ಅಗತ್ಯವಿರುವ ಹೆಚ್ಚುವರಿ ಪೊಲೀಸ್ ಸಿಬ್ಬಂದಿ ಹಾಗೂ ಮೂಲಸೌಕರ್ಯಗಳನ್ನು ಒದಗಿಸುವಂತೆ ಗೃಹ ಸಚಿವರಿಗೆ ತಿಳಿಸಲಾಗಿದೆ, ಕಲ್ಯಾಣ ಕರ್ನಾಟಕ ಭಾಗದ ಪ್ರತಿಯೊಂದು ಜಿಲ್ಲೆಯಲ್ಲೂ ಹಾಗೂ ವಿಶೇಷವಾಗಿ ರಾಯಚೂರು

3 ನೇ ಪುಟಕ್ಕೆ

ಇಸ್ಕಾನ್ ವತಿಯಿಂದ ಸೆ.4ರಂದು ಶ್ರೀಕೃಷ್ಣ ಜನ್ಮಾಷ್ಟಮಿ ಮಹೋತ್ಸವ ಅದ್ದೂರಿ ಆಚರಣೆ

ರಾಯಚೂರು,ಆ.31-

ಆಧ್ಯಾತ್ಮಿಕತೆ, ಸಂಸ್ಕೃತಿ ಹಾಗೂ ಸಮಾಜ ಸೇವೆಯ ಮೂಲಕ ಜಿಲ್ಲೆಯ ಜನರೊಂದಿಗೆ ನಿರಂತರ ಸಂಪರ್ಕ ಹೊಂದಿರುವ ಇಸ್ಕಾನ್ ರಾಯಚೂರು ವತಿಯಿಂದ ಸೆಪ್ಟೆಂಬರ್ 4ರಂದು ಶ್ರೀಕೃಷ್ಣ ಜನ್ಮಾಷ್ಟಮಿ ಮಹೋತ್ಸವವನ್ನು ಅದ್ದೂರಿಯಾಗಿ ಆಚರಿಸಲಾಗುವುದು ಎಂದು ಇಸ್ಕಾನ್ ರಾಯಚೂರು ಕೇಂದ್ರ ವ್ಯವಸ್ಥಾಪಕ ಸಾರಥಿ ಶ್ಯಾಮ ದಾಸ ತಿಳಿಸಿದರು.

ನಗರದ ಪತ್ರಿಕಾ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶ್ರೀಕೃಷ್ಣ ಜನ್ಮಾಷ್ಟಮಿ ಮಹೋತ್ಸವಕ್ಕೆ ಹತ್ತಾರು



ಸಾವಿರ ಭಕ್ತರು ಹಾಗೂ ಸಾರ್ವಜನಿಕರು ಆಗಮಿಸುವ ನಿರೀಕ್ಷೆಯಿದ್ದು, ಭಕ್ತರಿಗೆ ಸುಗಮ ದರ್ಶನ, ಕುಡಿಯುವ ನೀರು, ಸರತಿ ವ್ಯವಸ್ಥೆ ಹಾಗೂ ಉಚಿತ ಮಹಾಪ್ರಸಾದ ವಿತರಣೆಗೆ ವಿಶೇಷ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದರು. ಕಳೆದ ಒಂದು ವರ್ಷದಲ್ಲಿ ಇಸ್ಕಾನ್ ರಾಯಚೂರು ಧಾರ್ಮಿಕ ಚಟುವಟಿಕೆಗಳಿಗೆ ಸೀಮಿತವಾಗದೆ ಗೋಸೇವೆ, ಅನ್ನದಾನ, ಯುವಜನರ ವ್ಯಕ್ತಿತ್ವ ವಿಕಸನ ಹಾಗೂ ಶೈಕ್ಷಣಿಕ ಕಾರ್ಯಕ್ರಮಗಳ ಮೂಲಕ ಸಮಾಜಮುಖಿ ಸೇವೆಗಳನ್ನು ವಿಸ್ತರಿಸಿದೆ. ದೇವಾಲಯದ ಆವರಣದಲ್ಲಿರುವ ಶ್ರೀ ನಂದ ಗೋಶಾಲೆಯಲ್ಲಿ ಸುಮಾರು 50 ಜಾನುವಾರುಗಳಿಗೆ ನಿರಂತರ ಆರೈಕೆ, ಪೌಷ್ಟಿಕ ಆಹಾರ

3 ನೇ ಪುಟಕ್ಕೆ

ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಯಾಗಲಿದೆ, ಸರ್ಕಾರ ಸದಾ ನಿಮ್ಮೊಂದಿಗಿದೆ: ಸಚಿವ ಡಾ.ಅಜಯ್ ಧರ್ಮಸಿಂಗ್

ರಾಯಚೂರು,ಆ.31-

ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಹದ್ದಿನಾಳ ಗ್ರಾಮದ ಭೂಮಾನಂದ ಹದ್ದಿನಾಳ ಅವರನ್ನು ಇತ್ತೀಚೆಗೆಸುಂಕೇಶ್ವರಹಾಳ ಗ್ರಾಮದ ಬಳಿ ದುಷ್ಕರ್ಮಿಗಳು ಮಾರಕಾಸ್ತ್ರಗಳಿಂದ ಬರ್ಬರವಾಗಿ ಕೊಲೆ ಮಾಡಿದ ಹಿನ್ನೆಲೆಯಲ್ಲಿ ಆಗಸ್ಟ್ 31ರ ಸೋಮವಾರ ದಂದು ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ರಾಯಚೂರು ಜಿಲಾ ಉಸ್ತುವಾರಿ ಸಚಿವರಾದ ಡಾ.ಅಜಯ್ ಧರ್ಮಸಿಂಗ್ ಹದ್ದಿನಾಳ ಗ್ರಾಮಕ್ಕೆ ಭೇಟಿ ನೀಡಿ, ಕುಟುಂಬಕ್ಕೆ ಸಾಂತ್ವನ ಹೇಳಿದರು.

ಈ ವೇಳೆ ಸಚಿವರು



ಮಾತನಾಡಿ, ಜಿಲ್ಲೆಯಲ್ಲಿ ನಡೆದಿರುವ ಈ ಅಹಿತಕರ ಕೃತ್ಯ ಮತ್ತು ಘಟನೆಯನ್ನು ಸರ್ಕಾರ ತೀವ್ರವಾಗಿ ಪರಿಗಣಿಸಿದ್ದು, ಈ ಪ್ರಕರಣದಲ್ಲಿ ಭಾಗಿಯಾದ ತಪ್ಪಿತಸ್ಥರನ್ನು ಯಾವುದೇ ಕಾರಣಕ್ಕೂ ಬಿಡುವ ಪ್ರಶ್ನೆಯೇ ಇಲ್ಲ. ಈ ವಿಷಯವನ್ನು ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದು ಸುದೀರ್ಘ ಚರ್ಚೆ ನಡೆಸಿದ್ದೇವೆ. ಈ ಸಭೆಯಲ್ಲಿ ಉಪಮುಖ್ಯಮಂತ್ರಿಗಳು ಹಾಗೂ ಸಚಿವ ಪ್ರಿಯಾಂಕ್ ಖರ್ಗೆ ಅವರೂ ಕೂಡ ಉಪಸ್ಥಿತರಿದ್ದು, ಘಟನೆಯ ವಿವರಗಳನ್ನು ಕಲೆಹಾಕಲಾಗಿದೆ ಎಂದರು.

ಎಂಟು ಜನರ ಬಂಧನ: ಘಟನೆ ನಡೆದ ತಕ್ಷಣವೇ ಸಕ್ರಿಯವಾಗಿರುವ ಜಿಲ್ಲಾಡಳಿತ ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳೊಂದಿಗೆ ಮಾತುಕತೆ ನಡೆಸಲಾಗಿದ್ದು, ಪ್ರಕರಣಕ್ಕೆ ಸಂಬಂಧಿಸಿದಂತೆ ಈಗಾಗಲೇ ಎಂಟು ಜನರನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದೆ ಎಂದರು.

ನಿಷ್ಪಕ್ಷಪಾತ ತನಿಖೆ: ಘಟನೆಯ ಹಿಂದೆ ಯಾರಿದ್ದಾರೆ, ಪ್ರಚೋದನೆ ನೀಡಿದವರು ಯಾರು ಮತ್ತು ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಯಾರ ಕೈವಾಡವೇ ಇದ್ದರೂ ತನಿಖೆಯ ನಂತರ ಎಲ್ಲಾ ಸತ್ಯ ಬೆಳಕಿಗೆ ಬರಲಿದೆ. ನಮ್ಮ ಸರ್ಕಾರ ಸಂತ್ರಸ್ತರು ಮತ್ತು ಸಾರ್ವಜನಿಕರ ಜೊತೆಗಿದೆ. ಸ್ವತಃ ಮಾನ್ಯ ಮುಖ್ಯಮಂತ್ರಿಗಳನ್ನು ಭೇಟಿಯಾಗಿ, ರಾಯಚೂರಿಗೆ ಭೇಟಿ ನೀಡಿ ಪರಿಸ್ಥಿತಿ ಪರಿಶೀಲಿಸುವುದಾಗಿ ತಿಳಿಸಿ ಬಂದಿದ್ದೇವೆ. ಸಂತ್ರಸ್ತರಿಗೆ ಸೂಕ್ತ ನ್ಯಾಯ ದೊರಕಿಸಿಕೊಡುವುದು ನಮ್ಮ ಆದ್ಯತೆಯಾಗಿದೆ ಎಂದರು.

ದೇವದುರ್ಗ ಶಾಸಕಿ ಕರಿಯಮ್ಮ ಜಿ.ನಾಯಕ ಮಾತನಾಡಿ,

3 ನೇ ಪುಟಕ್ಕೆ

ಸಾಮಾಜಿಕ ಬದ್ಧತೆಯಿಂದ ಪತ್ರಕರ್ತರು ಕಾರ್ಯನಿರ್ವಹಿಸಲಿ: ಡಾ. ಪಲ್ಲವಿ ಪಾಟೀಲ್



ಹುಣಸಗಿ,ಆ.31-

ಪತ್ರಿಕೋದ್ಯಮವು ಕೇವಲ ಸುದ್ದಿಯನ್ನು ಪ್ರಕಟಿಸುವ ವೃತ್ತಿಯಲ್ಲ. ಸಮಾಜದ ಆಗುಹೋಗುಗಳನ್ನು ಜನರ ಮುಂದಿಡುವ ಜವಾಬ್ದಾರಿಯುತ ಸೇವೆಯಾಗಿದ್ದು, ಪತ್ರಕರ್ತರು ಸತ್ಯ, ನಿಷ್ಪಕ್ಷಪಾತತೆ ಹಾಗೂ ಸಾಮಾಜಿಕ ಬದ್ಧತೆಯಿಂದ ಕಾರ್ಯನಿರ್ವಹಿಸಬೇಕು ಎಂದು ಭಾರತೀಯ ಶಿಕ್ಷಣ ಮಂಡಲ ಕರ್ನಾಟಕ ಉತ್ತರ ಪ್ರಾಂತ ಸಹಕಾರ್ಯದರ್ಶಿ ಡಾ. ಪಲ್ಲವಿ ಪಾಟೀಲ್ ಹೇಳಿದರು.

ದಕ್ಷಿಣಏಷ್ಯಾ ಸಂಸ್ಕೃತಿ ಕಲಿಯುವುದು

ಪಟ್ಟಣದ ಸುಬ್ಬಮ್ಮ ಗೌಡತಿ ಮಂಗಲ ಭವನದಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಹುಣಸಗಿ ತಾಲೂಕು ಘಟಕದ ವತಿಯಿಂದ ಹಮ್ಮಿಕೊಂಡಿದ್ದ ತಾಲೂಕು ಮಟ್ಟದ ಪತ್ರಿಕಾ ದಿನಾಚರಣೆ 2026 ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದವರಿಗೆ ಪ್ರಶಸ್ತಿ ಪ್ರದಾನ, ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿ, ಬದಲಾಗುತ್ತಿರುವ ತಂತ್ರಜ್ಞಾನ ಹಾಗೂ ಸಾಮಾಜಿಕ ಮಾಧ್ಯಮ ಗಳ ನಡುವೆಯೂ ಪತ್ರಿಕೋದ್ಯಮ ತನ್ನ ವಿಶ್ವಾಸಾರ್ಹತೆಯನ್ನು ಉಳಿಸಿಕೊಳ್ಳಬೇಕಾಗಿದೆ.

ಸುದ್ದಿಯ ವೇಗಕ್ಕಿಂತ ಅದರ ನಿಖರತೆ ಮತ್ತು ಸತ್ಯಾಸತ್ಯತೆ ಮುಖ್ಯ. ಪತ್ರಕರ್ತರು ಯಾವುದೇ ಒತ್ತಡಕ್ಕೆ ಒಳಗಾಗದೆ ವಾಸ್ತವಾಂಶ ಆಧರಿಸಿ ವರದಿ ಮಾಡಬೇಕು ಎಂದು ಹೇಳಿದರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಮಲ್ಲಪ್ಪ ಸಂಕೀನ್ ಮಾತನಾಡಿ, ಗ್ರಾಮೀಣ ಭಾಗದ ಪತ್ರಕರ್ತರು ಅನೇಕ ಸವಾಲುಗಳ ನಡುವೆಯೂ ಜನರ ಸಮಸ್ಯೆಗಳಿಗೆ ಧ್ವನಿಯಾಗುತ್ತಿದ್ದಾರೆ. ಪತ್ರಕರ್ತರ ವೃತ್ತಿಪರ ಕೌಶಲ್ಯ ಹೆಚ್ಚಿಸುವುದರ ಜೊತೆಗೆ ಅವರ ಹಕ್ಕು, ಸುರಕ್ಷತೆ ಹಾಗೂ ಕುಟುಂಬದ ಭದ್ರತೆ ಅವಶ್ಯಕವಾಗಿದೆ ಎಂದರು.

ಉದ್ಯಮಿ ಡಾ.ಎಸ್.ಪಿ. ದಯಾನಂದ ಅವರ ಡಿವಿಜಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಮಾತನಾಡಿ, ಸಮಾಜದ ಅಭಿವೃದ್ಧಿಯಲ್ಲಿ ಮಾಧ್ಯಮಗಳ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಪತ್ರಕರ್ತರು ಜನರ ಸಮಸ್ಯೆಗಳಿಗೆ ಧ್ವನಿಯಾಗುವ ಮೂಲಕ ಆಡಳಿತ ವ್ಯವಸ್ಥೆಯ ಗಮನ ಸೆಳೆಯಬೇಕು. ಮಹಿಳೆಯರು ಕೂಡ ಪತ್ರಿಕೋದ್ಯಮ ಕ್ಷೇತ್ರಕ್ಕೆ ಆಸಕ್ತಿ ತೋರಬೇಕು ಎಂದು ತಿಳಿಸಿದರು.

ಮುಖಂಡ ಚಂದ್ರಶೇಖರ ದಂಡಿನ ಮಾತನಾಡಿ, ಪತ್ರಿಕೋದ್ಯಮದಲ್ಲಿ ನೈತಿಕತೆ, ವಸ್ತುನಿಷ್ಠತೆ ಮತ್ತು ಸಾಮಾಜಿಕ ಜವಾಬ್ದಾರಿ ಅತ್ಯಂತ ಮುಖ್ಯ. ಹೊಸ ತಲೆಮಾರಿನ ಪತ್ರಕರ್ತರು ಆಧುನಿಕ ತಂತ್ರಜ್ಞಾನವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವುದರ ಜೊತೆಗೆ ಪತ್ರಿಕೋದ್ಯಮದ ಮೂಲ ಮೌಲ್ಯಗಳನ್ನು ಕಾಪಾಡಿಕೊಂಡು ಮುನ್ನಡೆಯಬೇಕು ಎಂದು ಸಲಹೆ ನೀಡಿದರು.

ಜಿ.ಪಂ ಮಾಜಿ ಸದಸ್ಯರಾದ ಎಚ್.ಸಿ. ಪಾಟೀಲ್ ಹಾಗೂ ಬಸವರಾಜಸ್ವಾಮಿ ಸ್ಥಾವರಮಠ ಮಾತನಾಡಿ, ಪ್ರಜಾಪ್ರಭುತ್ವದ ನಾಲ್ಕನೇ ಅಂಗವಾಗಿರುವ ಪತ್ರಿಕೋದ್ಯಮ ಸಮಾಜದ ದಿಕ್ಕು-ದೆಸೆಯನ್ನು ನಿರ್ಧರಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಗ್ರಾಮೀಣ ಪ್ರದೇಶಗಳ ಜನರ ಸಮಸ್ಯೆಗಳು, ಅಭಿವೃದ್ಧಿ ಕಾರ್ಯಗಳ ಲೋಪದೋಷಗಳು ಹಾಗೂ ಜನಪರ ವಿಚಾರಗಳನ್ನು ಅಧಿಕಾರಿಗಳ ಗಮನಕ್ಕೆ ತರುವಲ್ಲಿ ಸ್ಥಳೀಯ ಪತ್ರಕರ್ತರ ಪಾತ್ರ ಮಹತ್ವದ್ದಾಗಿದೆ. ಪತ್ರಕರ್ತರು ವಸ್ತುನಿಷ್ಠ ಹಾಗೂ ನಿರ್ಭೀತಿಯಿಂದ ಕಾರ್ಯನಿರ್ವಹಿಸುವ ಮೂಲಕ ಸಮಾಜದ ವಿಶ್ವಾಸವನ್ನು ಮತ್ತಷ್ಟು ಗಟ್ಟಿಗೊಳಿಸಬೇಕು ಎಂದು ಹೇಳಿದರು.

ಶ್ರೀ ಮನಿಪ್ರ ಸಿದ್ದಲಿಂಗ ಮಹಾಸ್ವಾಮಿಗಳು ಆಶೀರ್ವಚಿಸಿದರು. ಈ ವೇಳೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ನಿವೃತ್ತ ಲೋಕಾಯುಕ್ತ ಡಿವೈಎಸ್ಪಿ ಶಂಕರ್ಎಂ.ರಾಗಿ(ಕರ್ತವ್ಯ ಸೇವಾ ರತ್ನ ಪ್ರಶಸ್ತಿ), ಡಾ.ಎಸ್.ಪಿ.ದಯಾನಂದ(ಸಹೃದಯ ಸೇವಾ ರತ್ನ ಪ್ರಶಸ್ತಿ), ಪರಮಣ್ಣ ನೀಲಗಲ್(ಶಿಕ್ಷಣ ಪ್ರೇರಕ ಪ್ರಶಸ್ತಿ), ಬಂಸವರಾಜ್ ಅಂಗಡಿ ಕೊಡೇಕಲ್(ಪತ್ರಿಕಾ ರತ್ನ ಪ್ರಶಸ್ತಿ), ಶಿಕ್ಷಕಿ ಗೀತಾ ಕಟ್ಟಿ(ಜ್ಞಾನ ದೀಪ್ತಿ ಪ್ರಶಸ್ತಿ) ವಿತರಿಸಿ ಸತ್ಕರಿಸಲಾಯಿತು. ಈ ವೇಳೆ ನೂತನ ಪದಾಧಿಕಾರಿಗಳ ಪದಗ್ರಹಣ ಮಾಡಲಾಯಿತು.

ಈ ಸಂದರ್ಭ ರಾಜಾ ವಿಜಯಕುಮಾರನಾಯಕ, ರಾಜಾ ಕುಶಾಲ್ ನಾಯಕ, ಸಿದ್ರಾಮಪ್ಪ ಮುದಗಲ್, ಬಸವರಾಜ ಮಲಗಲದಿನ್ನಿ, ವೀರೇಶ ಸಾಹು ಚಿಂಚೋಳಿ, ಸಂಗಣ್ಣ ಸಾಹು ವೈಲಿ, ಬಿ.ಎಂ ಅಳ್ಳಿಕೋಟಿ, ಆರ್.ಎಂ.ರೇವಡಿ, ಮರಲಿಂಗಪ್ಪ ನಾಟೇಕರ್, ಗೌಡಪ್ಪ ಬಾಲಗೌಡರ್ , ಗುಂಡು ಅಂಗಡಿ, ಮೇಲಪ್ಪ ಗುಳುಗಿ, ಮಲ್ಲು ಹೆಬ್ಬಾಳ, ಬಸವರಾಜ ಮೇಲಿನಮನಿ, ಯೂಸುಫ್ ಡೆಕ್ಕನ್, ಕನಕಪ್ಪ ಸಿದ್ದಾಪುರ, ನಂದಪ್ಪ ಪೀರಾಪುರ ಹಾಗೂ ಕಸಾಪ ಅಧ್ಯಕ್ಷ ವೆಂಕಟಗಿರಿ ದೇಶಪಾಂಡೆ, ಕಾನಿಪ ಅಧ್ಯಕ್ಷ ಬಾಲಪ್ಪ ಕುಪ್ಪಿ, ಪತ್ರಕರ್ತರಾದ ಬಸವರಾಜ್ ಶಾರದಳ್ಳಿ, ಚಂದ್ರಶೇಖರ ನಾಯ್ಡು, ಶಾಂತಿನಾಥ ವನಕುದರಿ, ಸಿದ್ದನಗೌಡ ಬಿರಾದಾರ ಸೇರಿದಂತೆ ಅನೇಕರು ಇದ್ದರು. ಪತ್ರಕರ್ತ ಮಲ್ಲಿಕಾರ್ಜುನ ಗುತ್ತೇದಾರ ಸ್ವಾಗತಿಸಿದರು. ಅಮರಯ್ಯಸ್ವಾಮಿ ಜಾಲಿಬೆಂಚಿ ನಿರೂಪಿಸಿದರು. ಪತ್ರಕರ್ತ ಬಾಪುಗೌಡ ಮೇಟಿ ವಂದಿಸಿದರು.

ಉತ್ತರಾಖಂಡ ಘಟನೆಯಿಂದ ಇಡೀ ದೇಶದ ಜನರಿಗೆ ಅವಮಾನ: ಡಾ. ಭೀಮಸೇನರಾವ್ ಶಿಂಧೆ



ಔರಾದ್,ಆ.31-

ಉತ್ತರಾಖಂಡದ ಹಲ್ದ್ವಾನಿಯ ರಾಮಲೀಲಾ ಮೈದಾನದಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಭಾಷಣ ಮಾಡಿದ ಸ್ಥಳವನ್ನು ಶುದ್ಧೀಕರಣ ಮಾಡಿರುವ ಘಟನೆ ಖಂಡನೀಯವಾಗಿದ್ದು, ಈ ಘಟನೆಯಿಂದ ಇಡೀ ದೇಶದ ಜನರಿಗೆ ಅವಮಾನವಾಗಿದೆ ಎಂದು ಕಾಂಗ್ರೆಸ್ ಮುಖಂಡ ಡಾ. ಭೀಮಸೇನರಾವ್ ಶಿಂಧೆ ಅವರು ಆಕ್ರೋಶ ವ್ಯಕ್ತಪಡಿಸಿದರು.

ಪಟ್ಟಣದಲ್ಲಿ ಶನಿವಾರ ಎಐಸಿಸಿ ಅಧ್ಯಕ್ಷ ಹಾಗೂ ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರು ಭಾಷಣ ಮಾಡಿದ ಸ್ಥಳವನ್ನು ಶುದ್ಧೀಕರಣ ಮಾಡಿದ ಘಟನೆ ಖಂಡಿಸಿ ಕಾಂಗ್ರೆಸ್ ವತಿಯಿಂದ ಪ್ರತಿಭಟನೆ ನಡೆಸಲಾಯಿತು. ನಂತರದಲ್ಲಿ ತಹಶೀಲ್ದಾರ್ ಅವರ ಮೂಲಕ ರಾಷ್ಟ್ರಪತಿಗಳಿಗೆ ಮನವಿ ಸಲ್ಲಿಸಲಾಯಿತು.

ಈ ಪ್ರತಿಭಟನೆಯಲ್ಲಿ ಮಾತನಾಡಿದ ಅವರು, ಈ ಕೃತ್ಯದಲ್ಲಿ ಭಾಗಿಯಾದವರನ್ನು ಗಡಿಪಾರು ಮಾಡಬೇಕು. ಇಂತಹ ಘಟನೆ ಮರುಕಳಿಸದಂತೆ ಕೇಂದ್ರ ಸರ್ಕಾರ ಕ್ರಮಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಸುಧಾಕರ್ ಕೊಳ್ಳೂರ್ ಅವರು ಮಾತನಾಡಿ, ಉತ್ತರಾಖಂಡದಲ್ಲಿ ಮನುವಾದಿಗಳು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ್ ಖರ್ಗೆ ಅವರು ಭಾಷಣೆ ಮಾಡಿದ ಸ್ಥಳ ಶುದ್ಧೀಕರಣ ಮಾಡಿರುವುದು ಅಕ್ಷಮ್ಯ ಅಪರಾಧ ಕೃತ್ಯವಾಗಿದೆ. ಈ ಕೃತ್ಯದಲ್ಲಿ ಭಾಗವಹಿಸಿದ ಕಿಡಿಗೇಡಿಗಳನ್ನು ಬಂಧಿಸಿ ಅವರ ವಿರುದ್ಧ ಕಠಿಣ ಕಾನೂನು ಕ್ರಮಕೈಗೊಳ್ಳಬೇಕು. ಈ ಘಟನೆಯಿಂದ ಇಡೀ ದೇಶಕ್ಕೆ ಅಪಮಾನವಾಗಿದೆ. ಇಂತಹ ಘಟನೆ ನಡೆಯದಂತೆ ಎಚ್ಚರವಹಿಸಬೇಕು. ಇಲ್ಲದಿದ್ದರೆ ರಾಷ್ಟ್ರವ್ಯಾಪಿ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದರು.

ಈ ಪ್ರತಿಭಟನೆಯಲ್ಲಿ ಕಾಂಗ್ರೆಸ್ ಮುಖಂಡರಾದ ರಾಮಣ್ಣಾ ವಡೆಯಾರ್, ಚೆನ್ನಪ್ಪ ಉಪ್ಪೆ, ಪ್ರಕಾಶ್ ಪಾಟೀಲ್, ಶರಣಪ್ಪಾ ಪಾಟೀಲ್, ಅನೀಲ್ ಹೆಡೆ, ರಾಜು ಎಡವೆ, ಶಲ್ಲಾವುದ್ದಿನ್ ಜಮಗಿ, ಹರಿದೇವ್ ಸಂಗನಾಳ್, ದತ್ತಾತ್ರಿ ಬಾಪೂರೆ, ಸತೀಷ್ ವಗ್ಗೆ, ಕೃಷ್ಣಾ ಕಾಂಬಳೆ, ಚೆಂದು ಡಿ.ಕೆ., ಮಲ್ಲಿಕಾರ್ಜುನ್ ಜೀರ್ಗೆ, ಪ್ರಶಾಂತ್ ಫುಲಾರೆ, ಅಂಜಾರೆಡ್ಡಿ ಹಾಗೂ ಪ್ರಕಾಶ್ ಜಾಧವ್ ಸೇರಿದಂತೆ ಅನೇಕ ಕಾಂಗ್ರೆಸ್ ನಾಯಕರು ಭಾಗವಹಿಸಿದ್ದರು.

ಕಲಬುರಗಿ ವಿಭಾಗ ಪ್ರಥಮ ವಚನ ಸಾಹಿತ್ಯ ಸಮ್ಮೇಳನ



ಕಲಬುರಗಿ,ಆ.31-

ವಚನ ಸಾಹಿತ್ಯವು ಊಹೆ ಅಥವಾ ಕಲ್ಪನೆಯ ಸಾಹಿತ್ಯವಲ್ಲ. ಅದು ಜನಮಾನಸದಲ್ಲಿ ಬೇರೂರಿರುವ ಶರಣರ ಅನುಭಾವದ ಮಾತುಗಳಾಗಿದ್ದು, ಆತ್ಮವಿಮರ್ಶೆಯ ಮೂಲಕ ಹೊರಹೊಮ್ಮಿದ ಅನುಭಾವದ ಸತ್ಯವಾಗಿದೆ ಎಂದು ನೆಲೋಗಿ ವಿರಕ್ತ ಮಠದ ಶ್ರೀ ಸಿದ್ದಲಿಂಗ ಮಹಾಸ್ವಾಮಿಗಳು ಹೇಳಿದರು.

ನಗರದ ಕನ್ನಡ ಭವನದ ಅಂಗಳದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಹಾಗೂ ಕರ್ನಾಟಕ ವಚನ ಸಾಹಿತ್ಯ ಅಕಾಡೆಮಿ ಆಶ್ರಯದಲ್ಲಿ ರವಿವಾರ ನಡೆದ ಕಲಬುರಗಿ ವಿಭಾಗ ಪ್ರಥಮ ವಚನ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ವಚನಾಭಿಮಾನಿಗಳಾಗುವುದಕ್ಕಿಂತ ವಚನಾನುಯಾಯಿಗಳಾಗುವುದು ಮುಖ್ಯ. ಬಸವ ಸಾಹಿತ್ಯವನ್ನು ತಲಸ್ಪರ್ಶಿಯಾಗಿ ಅಧ್ಯಯನ ಮಾಡಿದ ಡಾ. ಎಂ.ಎಂ. ಕಲಬುರಗಿಯವರು ಬಸವ ತತ್ವಕ್ಕಾಗಿ ತಮ್ಮ ಜೀವನವನ್ನೇ ಅರ್ಪಿಸಿಕೊಂಡು ಹುತಾತ್ಮರಾದವರು. ಇಂದಿನ ಯುವಕರಿಗೆ ವಚನ ಸಾಹಿತ್ಯದ ದರ್ಶನ ಮಾಡಿಸುವ ಮೂಲಕ ಸಮಾಜದಲ್ಲಿ ಜಾಗೃತಿ ಮೂಡಿಸುವ ಅಗತ್ಯವಿದೆ ಎಂದರು.

ಸಮಸಮಾಜ ನಿರ್ಮಾಣಕ್ಕೆ ಶರಣರ ಕೊಡುಗೆ

ಸಮ್ಮೇಳನ ಉದ್ಘಾಟಿಸಿದ ಹಿರಿಯ ಲೇಖಕಿ ಡಾ. ಜಯದೇವಿ ಗಾಯಕವಾಡ ಮಾತನಾಡಿ, ಜನಸಾಮಾನ್ಯರಿಗೆ ಮಾತನಾಡುವ ಶಕ್ತಿ ಹಾಗೂ ಆತ್ಮವಿಶ್ವಾಸ ನೀಡಿದ ಬಸವಾದಿ ಶರಣರ ವಚನ ಸಾಹಿತ್ಯವು ದೇಶದಲ್ಲಿ ಪ್ರಜಾಪ್ರಭುತ್ವದ ಆಶಯಗಳಿಗೆ ಬುನಾದಿ ಹಾಕಿದ ಸಾಹಿತ್ಯವಾಗಿದೆ ಎಂದರು.

ಸಮಾಜವನ್ನು ತಿದ್ದುವ ಕಾರ್ಯ ಮಾಡಿದ ವಚನಕಾರರು ಅಸ್ಪೃಶ್ಯತೆ ಹಾಗೂ ಮೇಲುಕೀಳು ಭೇದಗಳನ್ನು ಮೆಟ್ಟಿನಿಂತು ಸಮಸಮಾಜ ನಿರ್ಮಾಣಕ್ಕೆ ಶ್ರಮಿಸಿದರು. ಆರ್ಥಿಕ, ಸಾಮಾಜಿಕ ಹಾಗೂ ಧಾರ್ಮಿಕ ಸ್ವಾತಂತ್ರ್ಯದ ಆಶಯಗಳನ್ನು ಜನರಿಗೆ ಪರಿಚಯಿಸಿದ ಅನುಭವ ಮಂಟಪ ಮತ್ತು ಶರಣರ ವೈಚಾರಿಕ ಚಳವಳಿ ಇಂದಿಗೂ ಪ್ರಸ್ತುತವಾಗಿದೆ. ಕಾಯಕ ಮತ್ತು ದಾಸೋಹದ ಪರಿಕಲ್ಪನೆಯನ್ನು ಜಗತ್ತಿಗೆ ಪರಿಚಯಿಸಿದವರು ಶರಣರು ಎಂದು ಹೇಳಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ವಿಜಯಕುಮಾರ ಪಾಟೀಲ ತೇಗಲತಿಪ್ಪಿ ಮಾತನಾಡಿ, ವಚನ ಸಾಹಿತ್ಯದ ಮೂಲಕ ಕನ್ನಡ ಭಾಷೆ ಶ್ರೀಮಂತಗೊಂಡಿದೆ. ವಚನ ಸಾಹಿತ್ಯವು ವಿಶ್ವ ಸಾಹಿತ್ಯದ ಭಾಗವಾಗಿದ್ದು, ಕನ್ನಡ ಭಾಷೆಯ ಸೊಬಗನ್ನು ವಿಶ್ವದಾದ್ಯಂತ ವಿಸ್ತರಿಸಿದೆ. ಕನ್ನಡ ಭಾಷೆ ಪ್ರತಿಯೊಬ್ಬರ ಉಸಿರಾಗಬೇಕು. ಆಗ ಮಾತ್ರ ಕನ್ನಡ ಮತ್ತಷ್ಟು ಶ್ರೀಮಂತಗೊಳ್ಳಲು ಸಾಧ್ಯ ಎಂದರು.

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಡಾ. ಮಲ್ಲಿಕಾರ್ಜುನ ವಡ್ಡನಕೇರಿ ಮಾತನಾಡಿ, ವಚನಕಾರರು ಕೇವಲ ಬೋಧನೆ ಮಾಡಲಿಲ್ಲ; ತಮ್ಮ ಬದುಕಿನ ನಡೆ-ನುಡಿಯ ಮೂಲಕವೇ ಆದರ್ಶ ತೋರಿಸಿದರು. ಕಾಯಕ ಮತ್ತು ದಾಸೋಹದ ತತ್ವವನ್ನು ವಿಶ್ವಕ್ಕೆ ಪರಿಚಯಿಸಿದ ಬಸವಣ್ಣ ಅವರು ಕರ್ನಾಟಕದ ಸಾಂಸ್ಕೃತಿಕ ನಾಯಕ ಮಾತ್ರವಲ್ಲ, ವಿಶ್ವನಾಯಕರಾಗಿದ್ದಾರೆ ಎಂದು ಬಣ್ಣಿಸಿದರು.

ಮಹಾತ್ಮರ ವಿಚಾರಧಾರೆಯನ್ನು ಮುಂದಿಟ್ಟುಕೊಂಡು ಪರಿಷತ್ ಕಾರ್ಯನಿರ್ವಹಿಸುತ್ತಿದ್ದು, ಜನಪರ ಆಲೋಚನೆಗಳೊಂದಿಗೆ ಸಂಘಟನೆಯನ್ನು ಬಲಪಡಿಸಲಾಗಿದೆ ಎಂದರು.

ಸಾರಂಗಮಠದ ಜಗದ್ಗುರು ಶ್ರೀ ಡಾ. ಸಾರಂಗಧರ ದೇಶಿಕೇಂದ್ರ ಮಹಾಸ್ವಾಮಿಗಳು ಸಾನ್ನಿಧ್ಯ ವಹಿಸಿದ್ದರು. ಪದ್ಮಶ್ರೀ ಪ್ರಶಸ್ತಿ ಪುರಸ್ಕೃತೆ ಡಾ. ವಿಜಯಲಕ್ಷ್ಮೀ ದೇಶಮಾನೆ ಅವರನ್ನು ವಿಶೇಷವಾಗಿ ಗೌರವಿಸಲಾಯಿತು.

ಮಾಜಿ ಮೇಯರ್ ಶರಣಕುಮಾರ ಮೋದಿ, ಗುಲಬರ್ಗಾ ವಿಶ್ವವಿದ್ಯಾಲಯದ ನಿವೃತ್ತ ಗ್ರಂಥಪಾಲಕ ಡಾ. ಗಣಪತಿ ಸಿಂಧೆ, ಕರ್ನಾಟಕ ವಚನ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಬಿ.ಎಂ. ಪಾಟೀಲ ಕಲ್ಲೂರ, ಉದ್ಯಮಿ ರವಿ ವಿಭೂತಿ, ಜಿಲ್ಲಾ ಕಸಾಪ ಕಾರ್ಯದರ್ಶಿಗಳಾದ ಶಿವರಾಜ ಅಂಡಗಿ, ಧರ್ಮಣ್ಣ ಎಚ್. ಧನ್ನಿ, ಕೋಶಾಧ್ಯಕ್ಷ ಶರಣರಾಜ ಛಪ್ಪರಬಂದಿ, ಮುಡುಬಿ ಗುಂಡೇರಾವ, ಜಿ.ಜಿ. ವಣಿಕ್ಯಾಳ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಗಮನ ಸೆಳೆದ ಮಾತೆಂಬುದು ಜ್ಯೋತಿರ್ಲಿಂಗ ಗೋಷ್ಠಿ

ಸಮ್ಮೇಳನದಲ್ಲಿ ನಡೆದ ಮಾತೆಂಬುದು ಜ್ಯೋತಿರ್ಲಿಂಗ ಗೋಷ್ಠಿ ಗಮನ ಸೆಳೆಯಿತು. ವಚನ ಸಾಹಿತ್ಯ ಮತ್ತು ಸಂವಿಧಾನ ವಿಷಯ ಕುರಿತು ಪತ್ರಕರ್ತ ಡಾ. ಶಿವರಂಜನ್ ಸತ್ಯಂಪೇಟೆ ಮಾತನಾಡಿ, ವಚನ ಸಾಹಿತ್ಯವು ಭಾರತೀಯ ಸಂವಿಧಾನದಂತೆ ಸಾಮಾಜಿಕ ನ್ಯಾಯ, ಸಮಾನತೆ ಮತ್ತು ಮಾನವ ಹಕ್ಕುಗಳ ಆಶಯಗಳನ್ನು ಪ್ರತಿಪಾದಿಸುತ್ತದೆ ಎಂದರು.

ಬಸವಾದಿ ಶರಣರ ವಚನಗಳಲ್ಲಿ ಇಂದಿನ ಸಂವಿಧಾನದ ಮೂಲ ಆಶಯಗಳನ್ನು ಕಾಣಬಹುದು. ಮಹಿಳೆಯರಿಗೂ ಸಮಾನ ಅವಕಾಶ ಕಲ್ಪಿಸಿದ್ದ ಅನುಭವ ಮಂಟಪವು ಪ್ರಜಾಪ್ರಭುತ್ವದ ಅತ್ಯುತ್ತಮ ಮಾದರಿಯಾಗಿತ್ತು. ಹೀಗಾಗಿ ಅಂದಿನ ಅನುಭವ ಮಂಟಪವೇ ಇಂದಿನ ಸಂಸತ್ತಿನ ಪರಿಕಲ್ಪನೆಗೆ ಹೋಲಿಕೆಯಾಗುತ್ತದೆ ಎಂದು ಹೇಳಿದರು.

ವಚನ ಸಾಹಿತ್ಯ ಮತ್ತು ಮಹಿಳಾ ಸಂವೇದನೆ ಕುರಿತು ಡಾ. ವಿದ್ಯಾವತಿ ಬಲ್ಲೂರ ಮಾತನಾಡಿ, ಮಹಿಳೆಯರ ಮೇಲಿನ ಮೇಲುಕೀಳು ಭಾವನೆ, ಅನ್ಯಾಯ ಹಾಗೂ ತಾರತಮ್ಯವನ್ನು ಪ್ರಶ್ನಿಸಿದ ವಚನಕಾರರು ಮಹಿಳೆಯರಲ್ಲಿ ಆತ್ಮಗೌರವ ಮತ್ತು ನೈತಿಕ ಸ್ಥೈರ್ಯ ತುಂಬಿದರು ಎಂದರು.

ಅಬಲೆ ಎಂಬ ಕೀಳರಿಮೆಯಿಂದ ಮಹಿಳೆಯನ್ನು ಹೊರತಂದು ದೈವತ್ವದ ಸ್ಥಾನಕ್ಕೆ ಏರಿಸುವ ಚಿಂತನೆ ವಚನಗಳಲ್ಲಿ ಕಾಣುತ್ತದೆ. ಲಿಂಗತಾರತಮ್ಯವನ್ನು ವಿರೋಧಿಸಿ ಮಹಿಳೆಯರ ಆತ್ಮಗೌರವಕ್ಕೆ ಶರಣರು ಮಹತ್ವ ನೀಡಿದರು ಎಂದು ಹೇಳಿದರು. ಹೋರಾಟಗಾರ ಮರಿಯಪ್ಪ ಹಳ್ಳಿ ಅಧ್ಯಕ್ಷತೆ ವಹಿಸಿದ್ದರು. ಆರ್.ಜಿ. ಶಟಗಾರ, ಆನಂದ ಪಾಟೀಲ ಕೊರಳ್ಳಿ, ಬಸವರಾಜ ಸಾಗರ, ನೀಲಕಂಠ ಕಣ್ಣಿ, ಬಸವರಾಜ ಮೊರಬದ ಹಾಗೂ ಸಿದ್ದಲಿಂಗ ಬಾಳಿ ಉಪಸ್ಥಿತರಿದ್ದರು.

ಆಧುನಿಕ ವಚನಗಳ ವಾಚನ ಯನಗೊಲಿದ ವಚನ ಎಂಬ ಆಧುನಿಕ ವಚನ ವಾಚನ ಗೋಷ್ಠಿಯಲ್ಲಿ ಹಲವು ಹಿರಿಯ ಕವಿಗಳು ತಮ್ಮ ಸ್ವರಚಿತ ಆಧುನಿಕ ವಚನಗಳನ್ನು ವಾಚಿಸಿ ಗಮನ ಸೆಳೆದರು. ಹಿರಿಯ ಲೇಖಕಿ ಡಾ. ಶೋಭಾದೇವಿ ಚೆಕ್ಕಿ ಅಧ್ಯಕ್ಷತೆ ವಹಿಸಿದ್ದರು. ಬಸವರಾಜ ಕೋನೆಕ್ ಹಾಗೂ ಡಾ. ಎಸ್.ಎಸ್. ಪಾಟೀಲ ವೇದಿಕೆಯಲ್ಲಿದ್ದರು.

ವಚನಗಳ ಜಾಗೃತಿಯ ಮರುದರ್ಶನ ಅಗತ್ಯ

ಸಮಾರೋಪದಲ್ಲಿ ಹಿರಿಯ ಸಾಹಿತಿ ಡಾ. ಶ್ರೀಶೈಲ ನಾಗರಾಳ ಮಾತನಾಡಿ, ವಚನ ಚಳವಳಿಗೆ ದೇವರ ದಾಸಿಮಯ್ಯ ಭದ್ರ ಬುನಾದಿ ಹಾಕಿದರು. ಕಲ್ಯಾಣದಲ್ಲಿ ಆ ಚಳವಳಿ ಫಲ ನೀಡಿತು. ದೇವರನ್ನು ಹುಡುಕುವ ಹಾಗೂ ತೋರಿಸುವ ಹೊಸ ಮಾರ್ಗವನ್ನು ಶರಣರು ಸಮಾಜಕ್ಕೆ ಪರಿಚಯಿಸಿದರು ಎಂದರು.

ಶರಣರ ವೈಚಾರಿಕತೆಯನ್ನು ಬದುಕಿನಲ್ಲಿ ಅಳವಡಿಸಿಕೊಂಡರೆ ಜೀವನ ಹಸನಾಗುತ್ತದೆ. ಶರಣರ ಆಶಯಗಳು ಬಡವರು, ದಲಿತರು ಸೇರಿದಂತೆ ಸಮಾಜದ ಎಲ್ಲ ವರ್ಗಗಳ ಉದ್ಧಾರವನ್ನು ಒಳಗೊಂಡಿದ್ದವು. ಶರಣರನ್ನು ಇಂದಿಗೂ ಸಮಾಜ ಸ್ಮರಿಸುತ್ತಿರುವುದಕ್ಕೆ ಅವರ ಜನಪರ ಚಿಂತನೆಯೇ ಪ್ರಮುಖ ಕಾರಣವಾಗಿದೆ ಎಂದು ಹೇಳಿದರು.

ತೊನಸನಹಳ್ಳಿ ಅಲ್ಲಮಪ್ರಭು ಪೀಠದ ಶ್ರೀ ಡಾ. ಮಲ್ಲಣ್ಣಪ್ಪ ಮಹಾಸ್ವಾಮಿಗಳು ಸಾನ್ನಿಧ್ಯ ವಹಿಸಿದ್ದರು. ಅಪ್ಪಾರಾವ ಅಕ್ಕೋಣೆ, ರವೀಂದ್ರ ಶಾಬಾದಿ ಹಾಗೂ ವೀರೇಶ ಬೋಳಶೆಟ್ಟಿ ಮಾತನಾಡಿದರು.

ಸಮ್ಮೇಳನದ ಅಂಗವಾಗಿ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಅನೇಕರಿಗೆ ಕಾಯಕ ರತ್ನ ಗೌರವ ಪುರಸ್ಕಾರ ನೀಡಿ ಸತ್ಕರಿಸಲಾಯಿತು. ಸಂಗೀತ ಕಲಾವಿದ ರೇವಯ್ಯ ವಸ್ತದಮಠ ಹಾಗೂ ಸಂಗಡಿಗರು ಪ್ರಸ್ತುತಪಡಿಸಿದ ವಚನ ಸಂಗೀತ ಕಾರ್ಯಕ್ರಮ ಪ್ರೇಕ್ಷಕರ ಮನಸೂರೆಗೊಂಡಿತು.

ಸಹಕಾರ ಸಂಸ್ಥೆಗಳು ಸಮಾಜಮುಖಿ ಸೇವೆಗೆ ಆದ್ಯತೆ ನೀಡಲಿ: ಬಾಬುರಾವ ಯಡ್ರಾಮಿ



ಕಲಬುರಗಿ,ಆ.31-

ಸಹಕಾರ ಸಂಸ್ಥೆಗಳು ಕೇವಲ ಆರ್ಥಿಕ ವ್ಯವಹಾರಗಳಿಗೆ ಸೀಮಿತವಾಗದೆ, ಸದಸ್ಯರು ಹಾಗೂ ಸಾರ್ವಜನಿಕರ ಆರೋಗ್ಯ ಮತ್ತು ಸಾಮಾಜಿಕ ಕಲ್ಯಾಣಕ್ಕೂ ಆದ್ಯತೆ ನೀಡಬೇಕು ಎಂದು ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಬಾಬುರಾವ ಯಡ್ರಾಮಿ ಹೇಳಿದರು. ನಗರದ ಭವಾನಿ ನಗರ ರಿಂಗ್‌ರೋಡ್‌ನ ಬಬಲಾದ ಮಠದ ಸಮೀಪದ ಓಂ ಶ್ರೀ ವೀರಭದ್ರೇಶ್ವರ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ ವತಿಯಿಂದ ಆಯೋಜಿಸಿದ್ದ 202526ನೇ ಸಾಲಿನ 14ನೇ ವಾರ್ಷಿಕ ಸರ್ವಸಾಮಾನ್ಯ ಸಭೆ ಹಾಗೂ ಉಚಿತ ಆರೋಗ್ಯ ತಪಾಸಣಾ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು. ಸಹಕಾರ ಕ್ಷೇತ್ರವು ಜನರ ಆರ್ಥಿಕ ಪ್ರಗತಿಯ ಜೊತೆಗೆ ಆರೋಗ್ಯ, ಶಿಕ್ಷಣ ಸೇರಿದಂತೆ ಸಮಾಜಮುಖಿ ಚಟುವಟಿಕೆಗಳಲ್ಲಿಯೂ ತನ್ನ ಪಾತ್ರ ವಿಸ್ತರಿಸಬೇಕು. ಇಂತಹ ಉಚಿತ ಆರೋಗ್ಯ ಶಿಬಿರಗಳು ಬಡವರು ಹಾಗೂ ಮಧ್ಯಮ ವರ್ಗದವರಿಗೆ ತಜ್ಞ ವೈದ್ಯರ ಸಲಹೆ ಪಡೆಯಲು ಸಹಕಾರಿಯಾಗುತ್ತವೆ ಎಂದರು.

ಸಂಸ್ಥೆಯ ಅಧ್ಯಕ್ಷ ಚಂದ್ರಶೇಖರ ಎಸ್. ಪರಸರಡ್ಡಿ ಅಧ್ಯಕ್ಷತೆ ವಹಿಸಿದ್ದರು. ಉಪಾಧ್ಯಕ್ಷ ಸಿದ್ರಾಮಪ್ಪ ಎಚ್. ಬಿರಬಿಟ್ಟೆ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಕಲಬುರಗಿ ಪ್ರಾಂತ್ಯದ ವ್ಯವಸ್ಥಾಪಕ ಸಂಜೀವ ಕೊರಟ್ಕರ್, ಉದ್ಯಮಿ ಹಣಮಂತ ಎಸ್. ಪೂಜಾರಿ, ಪ್ರತಾಪರಾವ ಜಿ. ಕಾಕಡೆ, ಆಡಳಿತ ಮಂಡಳಿ ಸದಸ್ಯರು ಹಾಗೂ ಸಾರ್ವಜನಿಕರು ಪಾಲ್ಗೊಂಡಿದ್ದರು. ಶ್ರೀ ಆರೈಕೆ ಆಸ್ಪತ್ರೆ, ಗ್ಯಾಸ್ಟ್ರೋ ಲಿವರ್ ಮಲ್ಟಿಸ್ಪೆಷಾಲಿಟಿ ಸೆಂಟರ್ ಸಹಯೋಗದಲ್ಲಿ ನಡೆದ ಶಿಬಿರದಲ್ಲಿ ಗ್ಯಾಸ್ಟ್ರೋಎಂಟರಾಲಜಿಸ್ಟ್, ಹೆಪಟಾಲಜಿಸ್ಟ್ ಹಾಗೂ ಥೆರಪ್ಯೂಟಿಕ್ ಎಂಡೋಸ್ಕೋಪಿಸ್ಟ್ ಡಾ. ಶ್ರೀನಿತ್ ಬಿ. ಪಾಟೀಲ್ ಮತ್ತು ಫಿಸಿಷಿಯನ್ ಹಾಗೂ ಡಯಾಬಿಟಾಲಜಿಸ್ಟ್ ಡಾ. ಶ್ರೀಗೌರಿ ರೆಡ್ಡಿ ಪಾಟೀಲ್ ಆರೋಗ್ಯ ತಪಾಸಣೆ ನಡೆಸಿದರು. ರಕ್ತದೊತ್ತಡ, ರಕ್ತದಲ್ಲಿನ ಸಕ್ಕರೆ, ಥೈರಾಯ್ಡ್ ಸೇರಿದಂತೆ ಗ್ಯಾಸ್ಟ್ರೋ, ಲಿವರ್, ಪ್ಯಾಂಕ್ರಿಯಾಸ್, ಪಿತ್ತಕೋಶ ಹಾಗೂ ಕರುಳಿನ ಸಮಸ್ಯೆಗಳ ಕುರಿತು ಉಚಿತ ವೈದ್ಯಕೀಯ ಸಲಹೆ ನೀಡಲಾಯಿತು. ಶಿಬಿರದಲ್ಲಿ 500ಕ್ಕೂ ಹೆಚ್ಚು ಮಂದಿ ಭಾಗವಹಿಸಿ ಆರೋಗ್ಯ ಸೇವೆಯ ಪ್ರಯೋಜನ ಪಡೆದರು.

ನಾರಾಯಣ ಗುರು ಸಮಾನತೆಗಾಗಿ ಹೋರಾಡಿದ್ದರು: ಬಿ.ಕೆ. ಹರಿಪ್ರಸಾದ್


ಬೀದರ್,ಆ.31-

ನಾರಾಯಣ ಗುರುಗಳು ಸಮಾನತೆಗಾಗಿ ಹೋರಾಡಿದ್ದರು ಎಂದು ಕೆಪಿಸಿಸಿ ಅಧ್ಯಕ್ಷ ಬಿ.ಕೆ ಹರಿಪ್ರಸಾದ್ ಅವರು ಹೇಳಿದರು.

ನಗರದ ಬೆಲ್ದಾಳೆ ಕನ್ವೆನ್ಸ ನ್ ಹಾಲ್ ನಲ್ಲಿ ಕರ್ನಾಟಕ ರಾಜ್ಯ ಶೋಷಿತ ಸಮುದಾಯಗಳ ಒಕ್ಕೂಟ ಹಾಗೂ ಆರ್ಯ ಈಡಿಗ ಸಮಾಜದ ವತಿಯಿಂದ ರವಿವಾರ ಹಮ್ಮಿಕೊಂಡಿದ್ದ ನಾರಾಯಣ ಗುರು ಹಾಗೂ ಡಿ. ದೇವರಾಜ್ ಅರಸು ಅವರು ಜಯಂತ್ಯೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ದೇವಾಲಯದಲ್ಲಿ ದಲಿತರಿಗೆ, ಶೂದ್ರರಿಗೆ ಪ್ರವೇಶವಿರಲಿಲ್ಲ. ಆದ್ದರಿಂದ ನಾರಾಯಣ ಗುರುಗಳು ಬಂಡಾಯವೆದ್ದು ದೇವಾಲಯ ನಿರ್ಮಿಸಿದ್ದರು. ದೇವಸ್ಥಾನದ ಪ್ರವೇಶಕ್ಕಾಗಿ ಮಾತ್ರ ಅವರು ಹೋರಾಟ ಮಾಡಲಿಲ್ಲ. ಸಮ ಸಮಾಜ ನಿರ್ಮಾಣಕ್ಕಾಗಿ ಅವರು ಹೋರಾಡಿದರು ಎಂದರು.

80 ವರ್ಷಗಳ ಹಿಂದೆ ತಂದೆ ಆಸ್ತಿಯಲ್ಲಿ ಮಹಿಳೆಯರಿಗೆ ಪಾಲು ಇರಲಿಲ್ಲ. ಶಿಕ್ಷಣ ಕೂಡ ಅವರಿಗೆ ಸಿಗುತ್ತಿರಲಿಲ್ಲ. ಡಾ. ಅಂಬೇಡ್ಕರ್ ಅವರು ಮಹಿಳೆಯರ ಸಮಾನತೆಗಾಗಿ ಹಿಂದೂ ಕೋಡ್ ಬಿಲ್ ಮಸೂದೆ ತಂದಿದ್ದರು. ಈ ಕಾಯಿದೆ ಮೂಲಕ ಮಹಿಳೆಯರಿಗೆ ಸಮಾನ ಹಕ್ಕು, ತಂದೆ ಆಸ್ತಿಯಲ್ಲಿ ಪಾಲು, ಶಿಕ್ಷಣದಲ್ಲಿ ಸಮಾನತೆ ತರುವುದಕ್ಕೆ ಅವರು ಬಯಸಿದ್ದರು. ಆದರೆ, ಸಂಸತ್ತಿನಲ್ಲಿ ಆ ಮಸೂದೆ ಪಾಸ್ ಆಗಲಿಲ್ಲ. ಆದ್ದರಿಂದ, ಡಾ. ಬಿ.ಆರ್. ಅಂಬೇಡ್ಕರ್ ಅವರು ರಾಜೀನಾಮೆ ನೀಡಿದರು. ಅದಾದ ನಂತರ 2005ರಲ್ಲಿ ಡಾ. ಮನಮೋಹನ್ ಸಿಂಗ್ ಅವರು ಪ್ರಧಾನಿಯಾಗಿದ್ದಾಗ ತಂದೆಯ ಆಸ್ತಿಯಲ್ಲಿ ಮಹಿಳೆಯರಿಗೆ ಹಕ್ಕು ನೀಡುವ ಕಾಯ್ದೆ ಜಾರಿಗೆ ತರಲಾಯಿತು ಎಂದು ಅವರು ತಿಳಿಸಿದರು.



ಮೀಸಲಾತಿ ಎನ್ನುವುದು ಬಡತನ ನಿರ್ಮೂಲನೆ ಕಾರ್ಯಕ್ರಮವಲ್ಲ. ಸಮಾನವಾದ ಹಕ್ಕು ಸಿಗಬೇಕಾದರೆ ಮೀಸಲಾತಿ ಬೇಕಾಗಿದೆ. ಸಮಾಜದ ಕಟ್ಟ ಕಡೆಯ ವ್ಯಕ್ತಿಗೂ ಕೂಡ ಪ್ರಜಾಪ್ರಭುತ್ವದ ಸಮಾನವಾದ ಹಕ್ಕು ಸಿಗಬೇಕು. ಜಾತಿ ಗಣತಿ ಸಮೀಕ್ಷೆಗೆ ಕಾಂಗ್ರೆಸ್ ಪಕ್ಷ ಪ್ರಾಮಾಣಿಕವಾಗಿ ಪ್ರಯತ್ನ ಮಾಡುತ್ತದೆ ಎಂದು ಅವರು ಹೇಳಿದರು.

ಸಚಿವ ಈಶ್ವರ್ ಖಂಡ್ರೆ ಅವರು ಮಾತನಾಡಿ, ಸಮಾಜದಲ್ಲಿರುವ ತಾರತಮ್ಯ ವಿರೋಧಿಸಿದರು ನಾರಾಯಣ ಗುರುಗಳಾಗಿದ್ದಾರೆ. ಮನುಷ್ಯರೆಲ್ಲರೂ ಒಂದೇ ಎಂದು ಸಮ ಸಮಾಜ ನಿರ್ಮಾಣ ಮಾಡಲು ಅವರು ಹೊರಟಿದ್ದರು ಎಂದು ತಿಳಿಸಿದರು.

ದೇವರಾಜ್ ಅರಸು ಅವರು ಭೂ ಸುಧಾರಣೆ ಕಾಯ್ದೆ ಜಾರಿ ತರುವ ಮೂಲಕ ಒಳ್ಳೆಯ ಕೆಲಸ ಮಾಡಿದ್ದಾರೆ. ರಾಜೀವ್ ಗಾಂಧಿ ಅವರು ಪಂಚಾಯತ್ ನಲ್ಲಿ ಮಹಿಳೆಯರಿಗೆ ಮೀಸಲಾತಿ ನೀಡಿದ್ದಾರೆ ಎಂದರು. ಎಸ್ಐಆರ್ ನಿಂದ ಶೋಷಿತರು, ಬಡವರು ಮತದಾನದಿಂದ ವಂಚಿತರಾಗುತ್ತಿದ್ದಾರೆ. ಕೋಮುವಾದಿ ಶಕ್ತಿಗಳು ವಿಭಜಿಸುವ ಕೆಲಸ ಮಾಡುತ್ತವೆ. ಅವರ ವಿರುದ್ಧ ನಾವು ಒಗ್ಗಟ್ಟಾಗಿ ಹೋರಾಟ ಮಾಡಬೇಕಾಗಿದೆ ಎಂದು ತಿಳಿಸಿದ ಅವರು, ಅಹಿಂದ ಸಮುದಾಯಕ್ಕೆ ಒಂದು ಸಮುದಾಯ ಭವನವನ್ನು ಮಂಜೂರು ಮಾಡಿ, ನಿರ್ಮಾಣ ಮಾಡಿ, ಲೋಕಾರ್ಪಣೆ ಮಾಡಲಾಗುವುದು ಎಂದು ಭರವಸೆ ನೀಡಿದರು.

ಕಾರ್ಯಕ್ರಮದಲ್ಲಿ ಶಾಸಕ ರಹೀಮ್ ಖಾನ್, ಬಸವರಾಜ್ ಮಾಳಗೆ ಹಾಗೂ ಅನಿಲಕುಮಾರ್ ಬೆಲ್ದಾರ್ ಹಾಗೂ ಹಿಂದುಳಿದ ಜಾತಿಗಳ ಒಕ್ಕೂಟದ ಅಧ್ಯಕ್ಷ ಡಾ. ರಾಜಶೇಖರ್ ಸೇಡಂಕರ್ ಅವರು ಮಾತನಾಡಿದರು.

ಈ ಸಂದರ್ಭದಲ್ಲಿ ಬುಡಾ ಅಧ್ಯಕ್ಷ ಬಸವರಾಜ್ ಜಾಬಶೆಟ್ಟಿ, ಮಾಲಾ ನಾರಾಯಣರಾವ್, ಗ್ಯಾರಂಟಿ ಯೋಜನೆಗಳ ಜಿಲ್ಲಾಧ್ಯಕ್ಷ ಅಮೃತರಾವ್ ಚಿಮಕೋಡೆ, ಭೀಮಸೇನ್ ಶಿಂದೆ, ವಿಜಯಲಕ್ಷ್ಮೀ ಗಡ್ಡೆ, ರಮೇಶ್ ಡಾಕುಳಗಿ, ಬಾಬುರಾವ್ ಪಾಸ್ವಾನ್, ಸುಮನ್ ಶಿಂದೆ, ತಾನಾಜಿ ಸರ್ಗ, ಪ್ರದೀಪ್ ನಾಟೇಕರ್ ಹಾಗೂ ಸಂದೀಪ್ ಕಾಂಟೆ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಮಧುಸೂದನ್ ನಾಯ್ಕ್ ವರದಿ ಸಂಪೂರ್ಣವಾಗಿ ಜಾರಿಗೊಳಿಸಬೇಕು. ಆ ವರದಿ ಆಧಾರದ ಮೇಲೆ ಮೀಸಲಾತಿ ಪುನರ್ ನಿರ್ಧರಿಸಬೇಕು. ಎಸ್ಸಿ ಗೆ ಶೇ. 17, ಎಸ್ಟಿಗೆ ಶೇ. 7, ಪ್ರವರ್ಗ-1 ಕ್ಕೆ ಶೇ. 10 ಮತ್ತು ಪ್ರವರ್ಗ-2 ಗೆ ಶೇ. 10 ರಷ್ಟು ಮೀಸಲಾತಿ ಸಮರ್ಪಕವಾಗಿ ಕಲ್ಪಿಸಬೇಕು. ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಹಿಂದುಳಿದ ಧಾರ್ಮಿಕ ಅಲ್ಪಸಂಖ್ಯಾತ ಸಮುದಾಯಗಳಿಗೆ ಶೇ. 10 ರಷ್ಟು ಮೀಸಲಾತಿ ಕಲ್ಪಿಸಲು ಕ್ರಮ ಕೈಗೊಳ್ಳಬೇಕು ಎನ್ನುವ ಹಕ್ಕೊತ್ತಾಯಗಳು ಮಲ್ಲಿಕಾರ್ಜುನ್ ಕಾಂಬಳೆ ಅವರು ಮಂಡಿಸಿದರು.

ಒಂದನೇಯ ಪುಟದಿಂದ

ಹೊಕ್ರಾಣಿ ಗ್ರಾಮಕ್ಕೆ ಜಿಲ್ಲಾ ಉಸ್ತುವಾರಿ ಸಚಿವರ ಭೇಟಿ

ಕುಟುಂಬಕ್ಕೆ ಶೀಘ್ರ ನ್ಯಾಯ ಒದಗಿಸಲಾಗುವುದು:ಡಾ.ಅಜಯ್ ಧರ್ಮಸಿಂಗ್

ಹೆಚುವರಿ ಸಿಬ್ಬಂದಿಯನ್ನು ಭರ್ತಿ ಮಾಡುವ ಕುರಿತು ಉಪಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ್ ಅವರೊಂದಿಗೆ ಚರ್ಚಿಸಲಾಗಿದೆ ಎಂದರು.

ಜಿಲ್ಲಾಡಳಿತದ ವತಿಯಿಂದ ತಕ್ಷಣದ ಪರಿಹಾರ ಹಾಗೂ ಅಗತ್ಯ ಸೌಲಭ್ಯಗಳನ್ನು ಈಗಾಗಲೇ ಒದಗಿಸಲಾಗಿದೆ. ಮೃತ ಅಶ್ವಿನಿ ಅವರ ಕುಟುಂಬದವರನ್ನು ವೈಯಕ್ತಿಕವಾಗಿ ಭೇಟಿ ಮಾಡಿ ಸಾಂತ್ವನ ಹೇಳಲಾಗಿದ್ದು, ಅವರ ಇಬ್ಬರು ಮಕ್ಕಳ ಭವಿಷ್ಯಕ್ಕಾಗಿ ಸರ್ಕಾರದಿಂದ ಸಾಧ್ಯವಿರುವ ಎಲ್ಲಾ ಅನುಕೂಲಗಳನ್ನು ಮಾಡಿಕೊಡಲಾಗುವುದು ಎಂದರು.

ಮಹಿಳೆಯರ ಭದ್ರತೆ ಹಾಗೂ ನೈರ್ಮಲ್ಯಕ್ಕೆ ಆದ್ಯತೆ: ಎಸ್‌ಸಿ/ಎಸ್‌ಟಿ ಕಾಲೋನಿಗಳು ಹಾಗೂ ಪ್ರಮುಖ ಓಣಿಗಳಲ್ಲಿ ಮಹಿಳೆಯರ ಗೌರವ ಮತ್ತು ನೈರ್ಮಲ್ಯ ಕಾಪಾಡಲು ಶೌಚಾಲಯಗಳ ನಿರ್ಮಾಣಕ್ಕೆ ಆದ್ಯತೆ ನೀಡಲಾಗಿದೆ. ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿ ವತಿಯಿಂದ ಕಳೆದ ವರ್ಷ 25 ಕೋಟಿ ರೂ. ಅನುದಾನ ನಮ್ಮ ಭಾಗದ ಶೌಚಾಲಯಗಳಿಗಾಗಿ ಕಾಯ್ದಿರಿಸಲಾಗಿದ್ದು, ಈಗಾಗಲೇ ಕಾಮಗಾರಿಗಳು ಪ್ರಾರಂಭವಾಗಿವೆ. ಸಂತ್ರಸ್ತರಿಗೆ ನ್ಯಾಯ ಒದಗಿಸುವಲ್ಲಿ ಯಾವುದೇ ರೀತಿಯ ವಿಳಂಬ ಧೋರಣೆಗೆ ಆಸ್ಪದ ನೀಡುವುದಿಲ್ಲ. ಸರ್ಕಾರ ಸಂಪೂರ್ಣವಾಗಿ ನೊಂದ ಕುಟುಂಬದ ಪರವಾಗಿದ್ದು, ಅಗತ್ಯವಿರುವ ಎಲ್ಲಾ ತನಿಖಾ ಕ್ರಮಗಳನ್ನು ಕೈಗೊಳ್ಳಲಿದೆ ಎಂದು ಸಚಿವರು ಭರವಸೆ ನೀಡಿದರು.

ಸಂತ್ರಸ್ತ ಕುಟುಂಬಕ್ಕೆ ಸರ್ಕಾರಿ ಉದ್ಯೋಗ, ಭೂಮಿ ಹಂಚಿಕೆ, ನೈರ್ಮಲ್ಯ ಹಾಗೂ ಶೌಚಾಲಯ ಸೌಕರ್ಯ ಸೇರಿದಂತೆ ಇನ್ನಿತರ ಅಗತ್ಯ ಪರಿಹಾರಗಳನ್ನು ಒದಗಿಸಲಾಗುತ್ತದೆ ಎಂದು ಸಚಿವರು ಹೇಳಿದರು.

ಸಿಐಡಿ / ಎಸ್‌ಐಟಿ ತನಿಖೆಗೆ ಮನವಿ: ಪ್ರಕರಣವನ್ನು ಸಿಐಡಿ ಅಥವಾ ಎಸ್‌ಐಟಿ ತನಿಖೆಗೆ ವಹಿಸಬೇಕು ಎನ್ನುವ ಸಾರ್ವಜನಿಕರ ಹಾಗೂ ಕುಟುಂಬಸ್ಥರ ಬೇಡಿಕೆಯನ್ನು ಈಗಾಗಲೇ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಹಾಗೂ ಗೃಹ ಸಚಿವರ ಗಮನಕ್ಕೆ ತರಲಾಗಿದೆ. ಮುಖ್ಯಮಂತ್ರಿಗಳಿಗೆ ಈ ಕುರಿತು ಸಂಪೂರ್ಣ ವರದಿ ಹಾಗೂ ಮಾಹಿತಿಯನ್ನು ತಲುಪಿಸಿ, ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದರು.

ಮಾಜಿ ಸಚಿವರು ಹಾಗೂ ಹಾಲಿ ವಿಧಾನ ಪರಿಷತ್ ಸದಸ್ಯರಾದ ಎನ್.ಎಸ್.ಭೋಸರಾಜು ಅವರು ಮಾತನಾಡಿ, ಜಿಲ್ಲೆಯಲ್ಲಿ ನಡೆದಂತಹ ಈ ಘಟನೆಗಳು ನಾಗರಿಕರ ಸಮಾಜ ತಲೆ ತಗ್ಗಿಸುವಂತೆ ಮಾಡಿದೆ, ಪ್ರಕರಣಕ್ಕೆ ಸಂಬಂಧಿಸಿದಂತೆ ಗೃಹ ಸಚಿವರು ಹಾಗೂ ಸಮಾಜ ಕಲ್ಯಾಣ ಇಲಾಖೆಯ ಸಚಿವರೊಂದಿಗೆ ಈಗಾಗಲೇ ಚರ್ಚಿಸಲಾಗಿದ್ದು, ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಲು

ನಿಯೋಗವನ್ನು ಕರೆದೊಯ್ಯಲುವ್ಯವಸ್ಥೆ ಮಾಡಲಾಗಿದೆ. ಅಲ್ಲದೆ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆಯನ್ನು ನಡೆಸಲಾಗುತ್ತಿದೆ. ಒಟ್ಟಾರೆಯಾಗಿ ಯಾರಿಗೂ ಅನ್ಯಾಯವಾಗದಂತೆ ತನಿಖೆ ಮಾಡಬೇಕು. ಜಿಲ್ಲೆಯಲ್ಲಿ ಮುಂದಿನ ದಿನಗಳಲ್ಲಿ ಇಂತಹ ಘಟನೆಗಳು ಮರುಕಳಿಸದಂತೆ ಆಗಬೇಕು. ಜಿಲ್ಲೆಯಲ್ಲಿ ಎಲ್ಲರೂ ಸಹೋದರತ್ವ ಆಗಿರಬೇಕು ಎಂದರು.

ಇದೇ ಸಂದರ್ಭದಲ್ಲಿ ಸಂಸದರಾದ ಜಿ.ಕುಮಾರ ನಾಯಕ, ಮಾನ್ವಿ ಶಾಸಕರಾದ ಹಂಪಯ್ಯ ನಾಯಕ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಅರುಣಾಂಗ್ಷು ಗಿರಿ., ರಾಯಚೂರು ಸಹಾಯಕ ಆಯುಕ್ತ ಡಾ.ಹಂಪಣ್ಣ ಸಜ್ಜನ್, ಜಿಲ್ಲಾ ಪಂಚಾಯತ್ ಮುಖ್ಯ ಯೋಜನಾಧಿಕಾರಿ ಡಾ.ಟಿ.ರೋಣಿ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಜಿ.ಹರೀಶ್, ಸಿರವಾರ ತಹಶಿಲ್ದಾರ್ ಚಂದ್ರಶೇಖರ ಪವಾ್ರ್ ವಿವಿಧ ಜನಪ್ರತಿನಿಧಿಗಳು, ವಿವಿಧ ಇಲಾಖೆಯ ಅಧಿಕಾರಿಗಳು, ವಿವಿಧ ಸಂಘಟನೆಗಳ ಮುಖಂಡರು ಹಾಗೂ ಹೊಕ್ರಾಣಿ ಗ್ರಾಮಸ್ಥರು ಉಪಸ್ಥಿತರಿದ್ದರು.

ಇಂದಿನಿಂದ ಬಿಜೆಪಿ 10 ದಿನ ಪಾದಯಾತ್ರೆ :2028ರ ಚುನಾವಣೆಗೆ ಉ.ಕ.ದಲ್ಲಿ ಕಮಲ ಕಸರತ್ತು

ಸೃಷ್ಟಿಯ ಕೊರತೆ, ಸರ್ಕಾರಿ ನೇಮಕಾತಿಯಲ್ಲಿನ ಅಕ್ರಮದ ಆರೋಪ, ಮೀಸಲಾತಿ ವಿಚಾರ ಹಾಗೂ ಉತ್ತರ ಕರ್ನಾಟಕದ ಅಭಿವೃದ್ಧಿಯ ನಿರ್ಲಕ್ಷ್ಯವನ್ನು ಪಾದಯಾತ್ರೆಯ ಸಂದರ್ಭದಲ್ಲಿ ಪ್ರಮುಖವಾಗಿ ಪ್ರಸ್ತಾಪಿಸಲು ಬಿಜೆಪಿ ಸಿದ್ಧತೆ ನಡೆಸಿದೆ.

ಈ ಮೂಲಕ ವಾಲ್ಮೀಕಿ ನಿಗಮದ ಅಕ್ರಮದ ವಿಚಾರವನ್ನು ಮಾತ್ರ ಸೀಮಿತಗೊಳಿಸದೆ, ಉತ್ತರ ಕರ್ನಾಟಕದ ಹಲವು ಸಮಸ್ಯೆಗಳನ್ನು ಕಾಂಗ್ರೆಸ್ ಸರ್ಕಾರದ ವಿರುದ್ಧದ ರಾಜಕೀಯ ಕಥಾನಕವಾಗಿ ರೂಪಿಸಲು ಪಕ್ಷ ಮುಂದಾಗಿದೆ.

ಯಾರು ಯಾರು ಹೆಜ್ಜೆ ಹಾಕಲಿದ್ದಾರೆ?

ಪಾದಯಾತ್ರೆಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ವಿಧಾನಸಭೆ ಪ್ರತಿಪಕ್ಷದ ನಾಯಕ ಆರ್. ಅಶೋಕ್, ವಿಧಾನ ಪರಿಷತ್ ಪ್ರತಿಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಮಾಜಿ ಸಚಿವ ಬಿ. ಶ್ರೀರಾಮುಲು, ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಸೇರಿದಂತೆ ರಾಜ್ಯ ಮತ್ತು ಕೇಂದ್ರದ ಹಲವು ನಾಯಕರು ಪಾಲ್ಗೊಳ್ಳಲಿದ್ದಾರೆ. ಪಾದಯಾತ್ರೆ ಕೇವಲ ಬಿಜೆಪಿ ಸಂಘಟನಾ ಕಾರ್ಯಕ್ರಮವಾಗದೆ, ಕಾಂಗ್ರೆಸ್ ವಿರುದ್ಧದ ಪ್ರತಿಪಕ್ಷಗಳ ಒಗ್ಗಟ್ಟಿನ ವೇದಿಕೆಯಾಗುವ ಸಾಧ್ಯತೆಯೂ ಇದೆ.

2028ರ ಚುನಾವಣೆಗೆ ಈಗಿನಿಂದಲೇ ಸಿದ್ಧತೆ

2028ರ ವಿಧಾನಸಭಾ ಚುನಾವಣೆ ಇನ್ನೂ ದೂರವಿದ್ದರೂ ಬಿಜೆಪಿ ಈಗಿನಿಂದಲೇ ಬೂತ್ ಮಟ್ಟದ ಸಂಘಟನೆ ಬಲಪಡಿಸುವುದು, ಕಾರ್ಯಕರ್ತರನ್ನು ಚುರುಕುಗೊಳಿಸುವುದು, ಉತ್ತರ ಕರ್ನಾಟಕದ ಮತದಾರರೊಂದಿಗೆ ಸಂಪರ್ಕ ಸಾಧಿಸುವುದು ಹಾಗೂ ಕಾಂಗ್ರೆಸ್ ಸರ್ಕಾರದ ವಿರುದ್ಧ ನಿರಂತರ ರಾಜಕೀಯ ಕಥಾನಕ ನಿರ್ಮಿಸುವ ಪ್ರಯತ್ನಕ್ಕೆ ಚಾಲನೆ ನೀಡಿದೆ.

ರಾಯಚೂರು-ಬಳ್ಳಾರಿ ಭಾಗವು ಕಾಂಗ್ರೆಸ್, ಬಿಜೆಪಿ ಹಾಗೂ ಜೆಡಿಎಸ್ ಮೂರು ಪಕ್ಷಗಳಿಗೂ ರಾಜಕೀಯವಾಗಿ ಮಹತ್ವದ ಪ್ರದೇಶ. ಹೀಗಾಗಿ ಹತ್ತು ದಿನಗಳ ಕಾಲ ಒಂಬತ್ತು ವಿಧಾನಸಭಾ ಕ್ಷೇತ್ರಗಳಲ್ಲಿ ಸಾಗಲಿರುವ ಪಾದಯಾತ್ರೆ ಪಕ್ಷದ ಕಾರ್ಯಕರ್ತರಿಗೆ ಸಂಘಟನಾ ಶಕ್ತಿ ತುಂಬುವ ಕಾರ್ಯಕ್ರಮವಾಗಿಯೂ ಪರಿಣಮಿಸಲಿದೆ.

ಒಟ್ಟಾರೆ, ಬಿಜೆಪಿ ಪಾದಯಾತ್ರೆ ಸಾಮಾನ್ಯ ಪ್ರತಿಭಟನಾ ಕಾರ್ಯಕ್ರಮಕ್ಕಿಂತಲೂ ಕಾಂಗ್ರೆಸ್ ಸರ್ಕಾರದ ವಿರುದ್ಧ ಉತ್ತರ ಕರ್ನಾಟಕದಲ್ಲಿ ರಾಜಕೀಯ ನೆಲೆ ಗಟ್ಟಿಗೊಳಿಸುವ ಹಾಗೂ 2028ರ ವಿಧಾನಸಭಾ ಚುನಾವಣೆಗೆ ಪಕ್ಷದ ಸಂಘಟನಾ ಯಂತ್ರವನ್ನು ಈಗಿನಿಂದಲೇ ಸಜ್ಜುಗೊಳಿಸುವ ಕಾರ್ಯತಂತ್ರವಾಗಿ ಕಾಣುತ್ತಿದೆ.

ಮಸ್ಕಿಯಲ್ಲಿ ಮೊಳಗಲಿದೆ ಬಿಜೆಪಿಯ ಹೋರಾಟದ ಕಹಳೆ

ವಿಜಯೇಂದ್ರ-ಪ್ರತಾಪಗೌಡ ನೇತೃತ್ವದಲ್ಲಿ ಬೃಹತ್ ಬಹಿರಂಗ ಸಭೆ

ನಿಟ್ಟಿನಲ್ಲಿ ಪಾದಯಾತ್ರೆ ಆಯೋಜಿಸಲಾಗಿದೆ. ಮಸ್ಕಿ ಕ್ಷೇತ್ರದ ಜನರು ಹಾಗೂ ಪಕ್ಷದ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ಬಿಜೆಪಿ ಜಿಲ್ಲಾ ಕಾರ್ಯಕಾರಿಣಿ ಸದಸ್ಯ ಗೋವಿಂದಪ್ಪ ನಾಯಕ ರಂಗಾಪುರ ಹಾಗೂ ಮಸ್ಕಿ ಬಿಜೆಪಿ ಯುವ ಮೋರ್ಚಾ ಮುಖಂಡ ಬಸವರಾಜ ದಿನಸಮುದ್ರ ಮನವಿ ಮಾಡಿದರು.

ಪಾದಯಾತ್ರೆ ಹಾಗೂ ಬಹಿರಂಗ ಸಭೆಯನ್ನು ಯಶಸ್ವಿಗೊಳಿಸಲು ಕ್ಷೇತ್ರದ ವಿವಿಧ ಬೂತ್‌ಗಳಲ್ಲಿ ಮುಖಂಡರು ಹಾಗೂ ಕಾರ್ಯಕರ್ತರು ಸಿದ್ಧತೆ ನಡೆಸುತ್ತಿದ್ದಾರೆ.

ಇಂದಿನಿಂದ ಬಿಜೆಪಿ 10 ದಿನ ಪಾದಯಾತ್ರೆ :2028ರ ಚುನಾವಣೆಗೆ ಉ.ಕ.ದಲ್ಲಿ ಕಮಲ ಕಸರತ್ತು

ಹಂತ ಹಂತವಾಗಿ ಪ್ರಗತಿಯಲ್ಲಿದೆ. ನೆಲ ಮಹಡಿಯ ಅನ್ನದಾನ ಸಭಾಂಗಣದ ಕಾಮಗಾರಿ ಪೂರ್ಣಗೊಂಡಿದ್ದು, ಮುಂದಿನ ಹಂತದಲ್ಲಿ ಮೊದಲ ಮಹಡಿಯಲ್ಲಿ ದೇವಾಲಯದ ಸಭಾಂಗಣ ನಿರ್ಮಾಣ ಕಾರ್ಯ ಆರಂಭಿಸಲು ಸಿದ್ಧತೆ ನಡೆಸಲಾಗಿದೆ ಎಂದರು. ಸೆಪ್ಟೆಂಬರ್ 4ರಂದು ನಡೆಯುವ ಶ್ರೀಕೃಷ್ಣ ಜನ್ಮಾಷ್ಟಮಿ ಮಹೋತ್ಸವದ ಅಂಗವಾಗಿ ದಿನವಿಡೀ ನಿರಂತರ ಹರಿನಾಮ ಸಂಕೀರ್ತನೆ, ಹರೇ ಕೃಷ್ಣ ಮಹಾಮಂತ್ರದ ಸಾಮೂಹಿಕ ಜಪ ಹಾಗೂ ಭಗವದ್ಗೀತೆ ಪಠಣ ನಡೆಯಲಿದೆ. ಶ್ರೀಕೃಷ್ಣನಿಗೆ ಪವಿತ್ರ ದ್ರವ್ಯಗಳು, ಹಣ್ಣಿನ ರಸ ಹಾಗೂ ವಿವಿಧ ಪುಷ್ಪಗಳಿಂದ ಭವ್ಯ ಅಭಿಷೇಕ ನೆರವೇರಿಸಲಾಗುವುದು. ಮಧ್ಯರಾತ್ರಿ ಶ್ರೀಕೃಷ್ಣ ಜನ್ಮದ ಪವಿತ್ರ ಕ್ಷಣದಲ್ಲಿ ವಿಶೇಷ ಮಹಾ ಆರತಿ ನಡೆಯಲಿದ್ದು, ಶಂಖನಾದ, ದೀಪಾರಾಧನೆ ಹಾಗೂ ಭಕ್ತಿಗೀತೆಗಳ ನಡುವೆ ಶ್ರೀಕೃಷ್ಣ ಜನ್ಮೋತ್ಸವವನ್ನು ಸಂಭ್ರಮದಿಂದ ಆಚರಿಸಲಾಗುವುದು ಎಂದು ಸಾರಥಿ ಶ್ಯಾಮ ದಾಸ ತಿಳಿಸಿದರು.

ಹತ್ತಾರು ಸಾವಿರ ಭಕ್ತರ ಆಗಮನ ನಿರೀಕ್ಷೆಯಿರುವ ಹಿನ್ನೆಲೆಯಲ್ಲಿ ತ್ವರಿತ ದರ್ಶನಕ್ಕಾಗಿ ವಿಶೇಷ ಏಕಸಾಲಿನ ಸರತಿ ವ್ಯವಸ್ಥೆ ಮಾಡಲಾಗಿದೆ. ನಿರಂತರ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸುವುದರ ಜತೆಗೆ ಹಿರಿಯ ನಾಗರಿಕರು ಹಾಗೂ ವಿಶೇಷ ಅಗತ್ಯವಿರುವ ಭಕ್ತರಿಗೆ ಅಗತ್ಯ ಸೌಲಭ್ಯ ಒದಗಿಸಲಾಗುವುದು. ಪ್ರತಿಯೊಬ್ಬ ಭಕ್ತರಿಗೂ ಮಹಾಪ್ರಸಾದ ದೊರೆಯುವಂತೆ ದಿನವಿಡೀ ಉಚಿತ ಆಹಾರ ವಿತರಣಾ ಕೌಂಟರ್ ಗಳು ಕಾರ್ಯನಿರ್ವಹಿಸಲಿವೆ ಎಂದರು. ಈ ಬಾರಿಯ ಜನ್ಮಾಷ್ಟಮಿ ಆಚರಣೆಗೆ ಮತ್ತೊಂದು ವಿಶೇಷ ಮಹತ್ವವಿದ್ದು, ವಿಶ್ವಾದ್ಯಂತ ನಡೆಯುತ್ತಿರುವ ಇಸ್ಕಾನ್ 60 50 ಮೈಲಿಗಲ್ಲು ಅಭಿಯಾನದಲ್ಲಿ ಇಸ್ಕಾನ್ ರಾಯಚೂರು ಅಧಿಕೃತವಾಗಿ ಭಾಗಿಯಾಗಲಿದೆ. 1966ರಲ್ಲಿ ನ್ಯೂಯಾರ್ಕ್ ನಗರದಲ್ಲಿ ಸಂಸ್ಥಾಪಕ ಆಚಾರ್ಯ ಎ.ಸಿ. ಭಕ್ತಿವೇದಾಂತ ಸ್ವಾಮಿ ಶ್ರೀಲ ಪ್ರಭುಪಾದರು ಅಂತರರಾಷ್ಟ್ರೀಯ ಕೃಷ್ಣ ಪ್ರಜ್ಞಾ ಸಂಘವನ್ನು ಸ್ಥಾಪಿಸಿದ್ದರು. 2026ಕ್ಕೆ ಸಂಸ್ಥೆಯ ಸ್ಥಾಪನೆಯಾಗಿ 60 ವರ್ಷಗಳು ಪೂರ್ಣಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಇಸ್ಕಾನ್ 60 ಅಭಿಯಾನ ಹಮ್ಮಿಕೊಳ್ಳಲಾಗಿದೆ. 2027ರಲ್ಲಿ ಶ್ರೀಲ ಪ್ರಭುಪಾದರ ತಿರೋಭವದ 50ನೇ ವಾರ್ಷಿಕೋತ್ಸವ ನಡೆಯಲಿದ್ದು, ಅವರ ಆಧ್ಯಾತ್ಮಿಕ ಸಂದೇಶ ಹಾಗೂ ಜಗತ್ತಿನಾದ್ಯಂತ ಕೃಷ್ಣ ಪ್ರಜ್ಞೆಯ ಪ್ರಸಾರಕ್ಕೆ ನೀಡಿದ ಕೊಡುಗೆಯನ್ನು ಸ್ಮರಿಸುವ ಉದ್ದೇಶದಿಂದ ಪ್ರಭುಪಾದ 50 ಅಭಿಯಾನಕ್ಕೂ ಮಹತ್ವ ನೀಡಲಾಗಿದೆ.

ಇದರ ಅಂಗವಾಗಿ ರಾಯಚೂರಿನಲ್ಲಿ ಶ್ರೀಲ ಪ್ರಭುಪಾದರ ಭಗವದ್ಗೀತೆ ಯಥಾರೂಪ ಸೇರಿದಂತೆ ವೈದಿಕ ಸಾಹಿತ್ಯವನ್ನು ಜನರಿಗೆ ವ್ಯಾಪಕವಾಗಿ ತಲುಪಿಸುವ ಸಾಹಿತ್ಯ ಅಭಿಯಾನ ನಡೆಸಲಾಗುವುದು. ಜತೆಗೆ ಇಸ್ಕಾನ್‌ನ 60 ವರ್ಷಗಳ ಪಯಣದ ಸ್ಮರಣಾರ್ಥ ಶ್ರೀ ರಾಧಾ ಶ್ಯಾಮಚಂದ್ರ ಮಂದಿರ ನಿರ್ಮಾಣ ಯೋಜನೆಗೆ ಮತ್ತಷ್ಟು ವೇಗ ನೀಡಲಾಗುವುದು ಎಂದು ಹೇಳಿದರು. ಭಕ್ತರು ಹಾಗೂ ದಾನಿಗಳು ಇಸ್ಕಾನ್ ನ ವಿವಿಧ ಆಧ್ಯಾತ್ಮಿಕ ಮತ್ತು ಸಮಾಜ ಸೇವಾ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಬಹುದಾಗಿದ್ದು, ದೇವಾಲಯದ ಕಚೇರಿ ಅಥವಾ ಅಧಿಕೃತ ಆನ್ ಲೈನ್ ಪೋರ್ಟಲ್ ಮೂಲಕ ತಮ್ಮ ಸೇವಾ ಕೊಡುಗೆ ನೀಡಬಹುದು ಎಂದು ತಿಳಿಸಿದರು.'ನ್ ರಸ್ತೆಯಲ್ಲಿರುವ ಇಸ್ಕಾನ್ ಶ್ರೀ ರಾಧಾ ಶ್ಯಾಮಚಂದ್ರ ಮಂದಿರದಲ್ಲಿ ನಡೆಯಲಿದ್ದು, ಕಾರ್ಯಕ್ರಮಕ್ಕೆ ಪ್ರವೇಶ ಉಚಿತವಾಗಿದ್ದು ಎಲ್ಲ ಭಕ್ತರು ಹಾಗೂ ಸಾರ್ವಜನಿಕರಿಗೆ ಮುಕ್ತ ಅವಕಾಶ ಕಲ್ಪಿಸಲಾಗಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಅಭಿಷೇಕ್, ಶ್ರೀನಿವಾಸ್, ಶಶಿಮುಖಿ ಸಖಿ ದೇವಿದಾಸಿ, ಪರನಂದಿನಿ ಲಲಿತಾ ದೇವಿದಾಸಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಕೇಂದ್ರದ ಮಾನದಂಡದಂತೇ ಬರ ಘೋಷಣೆ: ಸಚಿವ ಡಾ.ಶರಣಪ್ರಕಾಶ ಪಾಟೀಲ್

ಯಾದಗಿರಿ,ಆ.31-

ಬರಪೀಡಿತ ತಾಲೂಕುಗಳ ಘೋಷಣೆ ಸರ್ಕಾರದ ವಿವೇಚನೆಗೆ ಬಿಟ್ಟ ವಿಚಾರವಲ್ಲ. ಕೇಂದ್ರ ಸರ್ಕಾರದ ಎನ್‌ಡಿಆರ್‌ಎಫ್ ಮತ್ತು ಎಸ್‌ಡಿಆರ್‌ಎಫ್ ಮಾರ್ಗಸೂಚಿಗಳ ಅನ್ವಯ ವೈಜ್ಞಾನಿಕ ಮಾನದಂಡಗಳ ಆಧಾರದ ಮೇಲೆ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣ ಪ್ರಕಾಶ್ ಪಾಟೀಲ್ ಹೇಳಿದರು.

ಅಬ್ಬೆ ತುಮಕೂರು ಶ್ರೀ ವಿಶ್ವಾರಾಧ್ಯ ಮಠದ ಪಾದಗಟ್ಟೆ ಆವರಣದ ಎದುರಿನ ಬಯಲು ಜಾಗದಲ್ಲಿ ರವಿವಾರ ಶರಣ ಸಕ್ರೆಪ್ಪಗೌಡ ಗುರು ವಿಶ್ವಾರಾಧ್ಯ ಆಯುರ್ವೇದ ಕಾಲೇಜು ಕಟ್ಟಡದ ಶಂಕುಸ್ಥಾಪನೆ ನೆರವೇರಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದ 101 ತಾಲೂಕುಗಳನ್ನು ಮೊದಲ ಹಂತದಲ್ಲಿ ಬರಪೀಡಿತ ಎಂದು ಘೋಷಿಸಲಾಗಿದೆ.

ಯಾದಗಿರಿ ಜಿಲ್ಲೆಯ ಶಹಾಪುರ ತಾಲೂಕು ಈ ಪಟ್ಟಿಗೆ ಸೇರಿದೆ. ಉಳಿದ ತಾಲೂಕುಗಳ ಕುರಿತು ಎರಡನೇ ಹಂತದ ಗ್ರೌಂಡ್ ಟ್ರೂಥಿಂಗ್ ಪ್ರಕ್ರಿಯೆ ನಡೆಯುತ್ತಿದ್ದು, ವರದಿ ಆಧಾರದ ಮೇಲೆ ಮುಂದಿನ ಹಂತಗಳಲ್ಲಿ ಬರ ಪಟ್ಟಿಗೆ ಸೇರಿಸಲಾಗುವುದು ಎಂದರು.

ಮಳೆ ಪ್ರಮಾಣ, ಮಳೆ ಕೊರತೆಯ ಅವಧಿ, ಡ್ರೈ ಸ್ಪೆಲ್, ಬೆಳೆಗಳ ಮೇಲೆ ಉಂಟಾಗಿರುವ ಪರಿಣಾಮ ಸೇರಿದಂತೆ ಹಲವು ಮಾನದಂಡಗಳ ಆಧಾರದ ಮೇಲೆ



ಬರ ಘೋಷಣೆ ಮಾಡಲಾಗುತ್ತದೆ. ರೈನ್ ಗೇಜ್‌ಗಳಲ್ಲಿ ದಾಖಲಾಗುವ ಮಳೆಯ ಪ್ರಮಾಣ ಮತ್ತು ಸ್ಥಳೀಯ ಪರಿಸ್ಥಿತಿಯನ್ನು ಪರಿಗಣಿಸಿ ಕಂದಾಯ ಇಲಾಖೆ ನಿರ್ಧಾರ ಕೈಗೊಳ್ಳುತ್ತಿದೆ ಎಂದು ತಿಳಿಸಿದರು.

ಯಾದಗಿರಿ, ಗುರುಮಠಕಲ್, ಸುರಪುರ ಸೇರಿದಂತೆ ಜಿಲ್ಲೆಯಲ್ಲಿ ಬರ ಪರಿಸ್ಥಿತಿ ಇರುವ ತಾಲೂಕುಗಳ ಕುರಿತು ಸರ್ಕಾರದ ಗಮನದಲ್ಲಿದೆ. ಎರಡನೇ ಹಾಗೂ ಮೂರನೇ ಹಂತದಲ್ಲಿ ಅಗತ್ಯವಿರುವ ತಾಲೂಕುಗಳನ್ನು ಘೋಷಣೆ ಮಾಡುವ ಉದ್ದೇಶ ಸರ್ಕಾರಕ್ಕಿದೆ ಎಂದು ಹೇಳಿದರು.

ಕಾನೂನು ಪ್ರಕಾರ ಕ್ರಮ

ಆರೆಸ್ಸೆಸ್ ಪಥಸಂಚಲನದಲ್ಲಿ ಭಾಗವಹಿಸಿದ್ದ ಯಾದಗಿರಿ ಜಿಲ್ಲೆಯ ಇಬ್ಬರು ಸರ್ಕಾರಿ ಶಿಕ್ಷಕರ ಅಮಾನತು ವಿಚಾರವಾಗಿ ಪ್ರತಿಕ್ರಿಯಿಸಿದ ಸಚಿವರು, ಸರ್ಕಾರಿ ಅಧಿಕಾರಿಗಳು ಮತ್ತು ನೌಕರರು ಯಾವುದೇ ಸಂಘಟನೆ ಅಥವಾ ಸಿದ್ಧಾಂತದೊಂದಿಗೆ ಗುರುತಿಸಿಕೊಂಡು ಕರ್ತವ್ಯ ನಿರ್ವಹಿಸುವಂತಿಲ್ಲ. ನಿಯಮ ಉಲ್ಲಂಘಿಸಿದವರ ವಿರುದ್ಧ ಕಾನೂನು ಪ್ರಕಾರ ಕ್ರಮ ಕೈಗೊಳ್ಳಲಾಗುತ್ತದೆ ಎಂದರು.

ಸರ್ಕಾರಿ ನೌಕರರು ತಮ್ಮ ಕರ್ತವ್ಯದಲ್ಲಿ ನಿಷ್ಪಕ್ಷಪಾತವಾಗಿರಬೇಕು. ವೈಯಕ್ತಿಕವಾಗಿ ಯಾವುದೇ ವಿಚಾರಧಾರೆ ಅನುಸರಿಸುವ ಸ್ವಾತಂತ್ರ್ಯವಿದ್ದರೂ, ಸರ್ಕಾರಿ ಹುದ್ದೆಯ ಜವಾಬ್ದಾರಿ ನಿರ್ವಹಿಸುವಾಗ ನಿಯಮ ಪಾಲನೆ ಮುಖ್ಯ ಎಂದು ಹೇಳಿದರು.

ಶಿಕ್ಷಕರ ಅಮಾನತು ವಿಚಾರದಲ್ಲಿ ಕಾಂಗ್ರೆಸ್ ಸರ್ಕಾರ ದ್ವೇಷದ ರಾಜಕಾರಣ ಮಾಡುತ್ತಿದೆ ಎಂಬ ಬಿಜೆಪಿ ನಾಯಕ ಪ್ರಹ್ಲಾದ್ ಜೋಶಿ ಅವರ ಆರೋಪಕ್ಕೆ ಪ್ರತಿಕ್ರಿಯಿಸಿದ ಸಚಿವ ಶರಣ ಪ್ರಕಾಶ್ ಪಾಟೀಲ್, ''ಪ್ರಹ್ಲಾದ್ ಜೋಶಿ ಅವರು ಮೊದಲು ಆತ್ಮಾವಲೋಕನ ಮಾಡಿಕೊಳ್ಳಬೇಕು. ಕಾಂಗ್ರೆಸ್ ಸರ್ಕಾರ ದ್ವೇಷದ ರಾಜಕಾರಣ ಮಾಡುವುದಿಲ್ಲ. ಸಾರ್ವಜನಿಕ ಹಿತಾಸಕ್ತಿ ಮತ್ತು ಅಭಿವೃದ್ಧಿ ವಿಚಾರಗಳೇ ನಮ್ಮ ಆದ್ಯತೆ'' ಎಂದರು.

ರಾಜಕೀಯಸುದ್ದಿ ಓದಿ

ಸಮಾಜದಲ್ಲಿ ಒಡಕು ಮೂಡಿಸುವ ಕೆಲಸ ಕಾಂಗ್ರೆಸ್ ಪಕ್ಷ ಮಾಡುವುದಿಲ್ಲ. ಕಾನೂನು ಮೀರಿ ಯಾರೇ ನಡೆದುಕೊಂಡರೂ ಅವರ ವಿರುದ್ಧ ನಿಯಮದಂತೆ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಹೇಳಿದರು.

ಅಮಾನತುಗೊಂಡ ಶಿಕ್ಷಕರು ನ್ಯಾಯಾಲಯದ ಮೊರೆ ಹೋದರೆ ಕಾನೂನು ತನ್ನದೇ ಆದ ರೀತಿಯಲ್ಲಿ ತೀರ್ಮಾನ ನೀಡುತ್ತದೆ. ಸರ್ಕಾರಕ್ಕೆ ನ್ಯಾಯಾಂಗ ವ್ಯವಸ್ಥೆಯ ಮೇಲೆ ನಂಬಿಕೆ ಇದೆ ಎಂದರು.

ಬಿಜೆಪಿ ನಡೆಸುತ್ತಿರುವ ಬಳ್ಳಾರಿ ಪಾದಯಾತ್ರೆ ಕುರಿತು ಮಾತನಾಡಿದ ಸಚಿವರು, ವಿಧಾನಸಭೆಯಲ್ಲಿ ಯಾವುದೇ ವಿಷಯದ ಕುರಿತು ಚರ್ಚೆಗೆ ಸರ್ಕಾರ ಸಿದ್ಧವಿತ್ತು. ಆದರೆ ಚರ್ಚೆ ನಡೆಸದೆ ಸದನದ ಸಮಯವನ್ನು ಘೋಷಣೆಗಳಲ್ಲೇ ಕಳೆದಿದ್ದಾರೆ ಎಂದು ಆರೋಪಿಸಿದರು. ನಾಗೇಂದ್ರ ಅವರು ಪಕ್ಷಕ್ಕೆ ಮುಜುಗರ ಆಗಬಾರದು ಎಂಬ ಕಾರಣದಿಂದ ಸ್ವಯಂಪ್ರೇರಣೆಯಿಂದ ರಾಜೀನಾಮೆ ನೀಡಿದ್ದಾರೆ. ಇದನ್ನು ರಾಜಕೀಯವಾಗಿ ಬಳಸಿಕೊಳ್ಳಲಾಗುತ್ತಿದೆ. ಜನರ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡುವ ಬದಲು ರಾಜಕೀಯ ಆರೋಪಗಳಿಗೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ ಎಂದು ಹೇಳಿದರು.

ಶಾಸಕ ಚನ್ನಾರೆಡ್ಡಿ ಪಾಟೀಲ್ ತುನ್ನೂರ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಬಸರೆಡ್ಡಿ ಅನಪುರ ಇದ್ದರು.

ಚಿತ್ರಕಲೆ, ಸಂಗೀತ ಪಠ್ಯದಲ್ಲಿ ಗುಣಾತ್ಮಕ ಶಿಕ್ಷಣಕ್ಕೆ ಪೂರಕ: ರಾಜೇಂದ್ರ ಝುಳಕಿ



ಕಲಬುರಗಿ,ಆ.31-

ಚಿತ್ರಕಲೆ ಹಾಗೂ ಸಂಗೀತವು ಮಕ್ಕಳಲ್ಲಿ ಸೃಜನಶೀಲತೆ ಬೆಳೆಸುವುದರ ಜತೆಗೆ ಪಠ್ಯಕ್ರಮದ ಗುಣಾತ್ಮಕ ಶಿಕ್ಷಣಕ್ಕೆ ಪೂರಕವಾಗಿವೆ ಎಂದು ಸಾಹಿತಿ ಹಾಗೂ ಶಿಕ್ಷಕ ರಾಜೇಂದ್ರ ಝುಳಕಿ ಹೇಳಿದರು.

ನಗರದ ಬಿಸಿಲು ಆರ್ಟ್ ಗ್ಯಾಲರಿಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಧನಸಹಾಯದಡಿ ಯುವ ಚಿತ್ರಕಲಾವಿದ ಮಲ್ಲಿಕಾರ್ಜುನ ವಿಶ್ವಕರ್ಮ ದಿಗ್ಗಾಂವ ಅವರ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಚಿತ್ರಕಲೆ ಕೇವಲ ಮನರಂಜನೆಯ ಮಾಧ್ಯಮವಲ್ಲ. ಅದು ಮಕ್ಕಳ ಕಲ್ಪನಾಶಕ್ತಿ, ಸೂಕ್ಷ್ಮಗ್ರಹಿಕೆ ಹಾಗೂ ಸೃಜನಶೀಲತೆಯನ್ನು ವಿಕಸನಗೊಳಿಸುವ ಪ್ರಮುಖ ಸಾಧನವಾಗಿದೆ. ಶಿಕ್ಷಣದ ಜತೆಗೆ ಕಲೆಗೂ ಸಮಾನ ಪ್ರೋತ್ಸಾಹ ನೀಡಿದಾಗ ವಿದ್ಯಾರ್ಥಿಗಳ ಸಮಗ್ರ ವ್ಯಕ್ತಿತ್ವ ವಿಕಸನ ಸಾಧ್ಯವಾಗುತ್ತದೆ ಎಂದು ಅವರು ಹೇಳಿದರು.

ಗುಲಬರ್ಗಾ ವಿಶ್ವವಿದ್ಯಾಲಯದ ದೃಶ್ಯಕಲಾ ಅಧ್ಯಯನ ವಿಭಾಗದ ಅಧ್ಯಾಪಕ ಡಾ. ಮಲ್ಲಿಕಾರ್ಜುನ ಬಾಗೋಡಿ ಮುಖ್ಯ ಅತಿಥಿಯಾಗಿ ಮಾತನಾಡಿ, ಮಾನವನ ಸೃಜನಶೀಲತೆಯನ್ನು ಬೆಳೆಸುವಲ್ಲಿ ಚಿತ್ರಕಲೆ ಮಹತ್ವದ ಪಾತ್ರ ವಹಿಸುತ್ತದೆ ಎಂದರು.

ಹಂಪಿ, ಕಲಬುರಗಿ ಸೇರಿದಂತೆ ಕಲ್ಯಾಣ ಕರ್ನಾಟಕದ ಐತಿಹಾಸಿಕ ಸ್ಮಾರಕಗಳು, ಕೋಟೆ ಕೊತ್ತಲುಗಳು, ದೇವಾಲಯಗಳು ಹಾಗೂ ವಾಸ್ತುಶಿಲ್ಪಗಳು ಚಿತ್ರಕಲಾವಿದರಿಗೆ ಸ್ಫೂರ್ತಿಯ ಮೂಲಗಳಾಗಿವೆ. ರಾಷ್ಟ್ರಕೂಟರ ಕಾಲದ ಇತಿಹಾಸ, ಕಮಲ ಮಹಲ್, ಕಲಬುರಗಿ ಬಹಮನಿ ಕೋಟೆ ಸೇರಿದಂತೆ ಈ ಭಾಗದ ಸಾಂಸ್ಕೃತಿಕ ಪರಂಪರೆಯನ್ನು ಚಿತ್ರಕಲೆಯ ಮೂಲಕ ಮುಂದಿನ ಪೀಳಿಗೆಗೆ ಪರಿಚಯಿಸುವ ಅಗತ್ಯವಿದೆ ಎಂದು ಹೇಳಿದರು.

ದೇಶ ಸುತ್ತು, ಕೋಶ ಓದು ಎಂಬ ಮಾತಿನಂತೆ, ವಿವಿಧ ಸ್ಥಳಗಳನ್ನು ವೀಕ್ಷಿಸಿ ಅಲ್ಲಿನ ಕಲೆ, ಸಂಸ್ಕೃತಿ ಮತ್ತು ಇತಿಹಾಸವನ್ನು ಅರಿಯುವುದು ಮಾನವನ ಜ್ಞಾನ ವಿಕಾಸಕ್ಕೆ ಸಹಕಾರಿ. ಚಿತ್ರಗಳು ಇತಿಹಾಸದ ಹಲವು ಪುಟಗಳನ್ನು ದಾಖಲಿಸುವ ದೃಶ್ಯ ದಾಖಲೆಗಳಾಗಿವೆ. ಹಸ್ತಪ್ರತಿಗಳು, ನಕ್ಷೆಗಳು, ಸ್ಮಾರಕಗಳ ಚಿತ್ರಗಳು ಹಾಗೂ ಜನಜೀವನವನ್ನು ಬಿಂಬಿಸುವ ಕಲಾಕೃತಿಗಳು ಹಿಂದಿನ ಕಾಲದ ಬದುಕು, ಭಾಷೆ, ಸಂಸ್ಕೃತಿ ಮತ್ತು ಪರಂಪರೆಯನ್ನು ತಿಳಿಯಲು ನೆರವಾಗುತ್ತವೆ ಎಂದರು.

ಹಿಂದೆ ಕಲೆಗೆ ರಾಜಾಶ್ರಯ ದೊರೆಯುತ್ತಿತ್ತು. ಈಗಲೂ ರಾಜಕೀಯ ಮುಖಂಡರು ಹಾಗೂ ಸರ್ಕಾರಗಳು ಕಲೆ, ಸಾಹಿತ್ಯ, ಇತಿಹಾಸ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಕಾರ್ಯಕ್ರಮಗಳಿಗೆ ಪ್ರೋತ್ಸಾಹ ನೀಡಬೇಕು. ಕಲ್ಯಾಣ ಕರ್ನಾಟಕ ಉತ್ಸವಗಳಂತಹ ಕಾರ್ಯಕ್ರಮಗಳ ಮೂಲಕ ಈ ಭಾಗದ ಕಲೆ ಮತ್ತು ಪರಂಪರೆಗೆ ಹೆಚ್ಚಿನ ಪ್ರಚಾರ ದೊರೆಯಬೇಕು ಎಂದು ಅವರು ಅಭಿಪ್ರಾಯಪಟ್ಟರು.

ವಿ.ಬಿ. ಬಿರಾದಾರ ಕಲಾ ಪ್ರತಿಷ್ಠಾನದ ಅಧ್ಯಕ್ಷ ವಿ.ಬಿ. ಬಿರಾದಾರ ಅಧ್ಯಕ್ಷತೆ ವಹಿಸಿದ್ದರು.

ಮಲ್ಲಿಕಾರ್ಜುನ ಕೋರಳ್ಳಿ ಕಾರ್ಯಕ್ರಮ ನಿರೂಪಿಸಿ ವಂದಿಸಿದರು. ಮಲ್ಲಿಕಾರ್ಜುನ ವಿಶ್ವಕರ್ಮ ಅವರ ಕುಟುಂಬದ ಸದಸ್ಯರು, ಚಿತ್ರಕಲಾವಿದರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.



ಕಲಬುರಗಿ ಬಹುಭಾಷಾ ಕವಿಗೋಷ್ಠಿ; ಸಾಕ್ಷಿಯಾದ ಬೈಕ್ ರ್‍ಯಾಲಿ

ಕಲಬುರಗಿ,ಆ.31-

ಡಾ. ಶರಣಬಸಪ್ಪ ಅಪ್ಪಾಜಿಯವರ ಪ್ರಥಮ ಪುಣ್ಯಸ್ಮರಣೆಯ ಅಂಗವಾಗಿ ನಗರದ ದೊಡ್ಡಪ್ಪ ಅಪ್ಪ ಸಭಾಮಂಟಪದಲ್ಲಿ ರವಿವಾರ ಬೆಳಿಗ್ಗೆ ವಿಶೇಷ ಬಹುಭಾಷಾ ಕವಿಗೋಷ್ಠಿ ಹಾಗೂ ಮಹಿಳೆಯರ ಬೃಹತ್ ಬೈಕ್ ರ್‍ಯಾಲಿ ನಡೆಯಿತು.

ಕಾವ್ಯ, ಸಾಹಿತ್ಯ ಮತ್ತು ಭಾವನೆಗಳ ಸಂಗಮವಾಗಿದ್ದ ಬಹುಭಾಷಾ ಕವಿಗೋಷ್ಠಿಯಲ್ಲಿ ವಿವಿಧ ಭಾಷೆಗಳ ಕವಿಗಳು ಹಾಗೂ ಕಾವ್ಯಾಸಕ್ತರು ಭಾಗವಹಿಸಿ ಅಪ್ಪಾಜಿಯವರ ಸ್ಮರಣೆಗೆ ಕಾವ್ಯನಮನ ಸಲ್ಲಿಸಿದರು.

ಎರಡು ಅಧಿವೇಶನಗಳಲ್ಲಿ ನಡೆದ ಕವಿಗೋಷ್ಠಿಯಲ್ಲಿ ಪುರುಷ ಹಾಗೂ ಮಹಿಳಾ ಕವಿಗಳು ಉತ್ಸಾಹದಿಂದ ಪಾಲ್ಗೊಂಡರು. ಕನ್ನಡ ಸೇರಿದಂತೆ ವಿವಿಧ ಭಾಷೆಗಳಲ್ಲಿ ಕವಿಗಳು ತಮ್ಮ ಸ್ವರಚಿತ ಕವನಗಳನ್ನು ವಾಚಿಸುವ ಮೂಲಕ ಸಾಹಿತ್ಯದ ವೈವಿಧ್ಯತೆಯನ್ನು ಅನಾವರಣಗೊಳಿಸಿದರು.

ಡಾ. ಶರಣಬಸಪ್ಪ ಅಪ್ಪಾಜಿಯವರ ಪ್ರಥಮ ಪುಣ್ಯಸ್ಮರಣೆಯ ಅಂಗವಾಗಿ ನಡೆದ ಮಹಿಳೆಯರ ಬೃಹತ್ ಬೈಕ್ ರ್‍ಯಾಲಿ ಗಮನ ಸೆಳೆಯಿತು. ಶರಣಬಸವ ವಿಶ್ವವಿದ್ಯಾಲಯದ ಆವರಣದಿಂದ ಆರಂಭಗೊಂಡ ರ್‍ಯಾಲಿಯನ್ನು ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಅಧ್ಯಕ್ಷೆ ಮಾತೋಶ್ರೀ ಡಾ. ದಾಕ್ಷಾಯಿಣಿ ಅವ್ವಾಜಿಯವರು ಧ್ವಜ ತೋರಿಸುವ ಮೂಲಕ ಉದ್ಘಾಟಿಸಿದರು.

ನಗರದ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿದ ರ್‍ಯಾಲಿಯು ಶರಣಬಸವೇಶ್ವರ ದೇವಸ್ಥಾನವನ್ನು ತಲುಪಿತು.



ಸಿಂಧನೂರು ರಾಯರ ಮಠದಲ್ಲಿ ರಾಯರ ಮಧ್ಯಾರಾಧನೆ ಪ್ರಯುಕ್ತ ಸುಪ್ರಭಾತ ಹಾಗೂ ಅಷ್ಟೋತ್ತರ ಕಾರ್ಯಕ್ರಮ.

ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆಯಾಗದಂತೆ ಕ್ರಮಕೈಗೊಳ್ಳಿ: ಸಚಿವ ಈಶ್ವರ್ ಖಂಡ್ರೆ

ಬೀದರ್,ಆ.31-

ಜಿಲ್ಲೆಯಲ್ಲಿ ಎಲ್ಲಿಯೂ ಕುಡಿಯುವ ನೀರಿನ ಸಮಸ್ಯೆ ಕಂಡುಬಂದಲ್ಲಿ ಅಧಿಕಾರಿಗಳು 24 ಗಂಟೆಯೊಳಗಾಗಿ ಇತ್ಯರ್ಥಪಡಿಸಬೇಕು ಎಂದು ಗ್ರಾಮೀಣಾಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ್ ಖಂಡ್ರೆ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಶನಿವಾರ ಆಯೋಜಿಸಲಾಗಿದ್ದ ಬರ ಪರಿಸ್ಥಿತಿ, ಕುಡಿಯುವ



ನೀರು, ಇ-ಸ್ವತ್ತು ಹಾಗೂ ವಿಬಿ-ಜಿ ರಾಮ್ ಜೀ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಅಧಿಕಾರಿಗಳು ಪ್ರತಿಯೊಂದು ಗ್ರಾಮಕ್ಕೂ ಖುದ್ದಾಗಿ ಭೇಟಿ ನೀಡಿ, ಕುಡಿಯುವ ನೀರಿನ ಅಭಾವ ಎದುರಾಗದಂತೆ ಮುನ್ನೆಚ್ಚರಿಕೆ ವಹಿಸಬೇಕು. ನೀರು ಪೂರೈಕೆಯಂತಹ ಅತ್ಯಗತ್ಯ ಸೇವೆಯಲ್ಲಿ ಕರ್ತವ್ಯ ಲೋಪ ಎಸಗುವ ಅಧಿಕಾರಿಗಳು ಹಾಗೂ ಸಿಬ್ಬಂದಿಗಳ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಲಾಗುವುದು ಎಂದು ಕಟ್ಟುನಿಟ್ಟಿನ ಸೂಚನೆ ನೀಡಿದರು.

ವಿಬಿ-ಜಿ ರಾಮ್ ಜೀ ಯೋಜನೆಯಡಿ ಗ್ರಾಮೀಣ ಭಾಗದ ಮೂಲಸೌಕರ್ಯ ಅಭಿವೃದ್ಧಿಗೆ ಆದ್ಯತೆ ನೀಡಲಾಗುತ್ತಿದ್ದು, ಸಾರ್ವಜನಿಕರಿಗೆ ಸ್ಥಳೀಯವಾಗಿಯೇ ಉದ್ಯೋಗ ಹಾಗೂ ಆರ್ಥಿಕ ಭದ್ರತೆ ಒದಗಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ. ಈ ಯೋಜನೆಯಡಿ ಗರಿಷ್ಠ ಪ್ರಮಾಣದಲ್ಲಿ ಕಾಮಗಾರಿಗಳನ್ನು ಸೃಜಿಸಿ ಕೂಲಿ ಕಾರ್ಮಿಕರಿಗೆ ನಿಗದಿತ ಅವಧಿಯಲ್ಲಿ ವೇತನ ಪಾವತಿಸಬೇಕು. ಯಾವುದೇ ತರಹದ ಅಕ್ರಮಗಳಿಗೆ ಆಸ್ಪದ ನೀಡದೇ ನಿಗದಿತ ಸಮಯದಲ್ಲಿ ಗುಣಮಟ್ಟದೊಂದಿಗೆ ಕಾಮಗಾರಿ ಪೂರ್ಣಗೊಳಿಸಬೇಕು. ಬೀದರ್ ಜಿಲ್ಲೆಯು ಗಡಿಭಾಗದಲ್ಲಿರುವ ಕಾರಣ ಜಿಲ್ಲೆಯಿಂದ ಕೂಲಿ ಕಾರ್ಮಿಕರು ಕೆಲಸಕ್ಕಾಗಿ ನೆರೆ ರಾಜ್ಯಗಳಿಗೆ ವಲಸೆ ಹೋಗುವುದನ್ನು ತಡೆಯಲು ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಬೇಕು ಎಂದು ಹೇಳಿದರು.

ಜಿಲ್ಲೆಯ ವಿವಿಧೆಡೆ ವಿದ್ಯುತ್ ತಂತಿಗಳು ಅಪಾಯಕಾರಿ ಹಂತದಲ್ಲಿದ್ದು, ಸರಣಿ ಅಪಘಾತ ಹಾಗೂ ಸಾವು-ನೋವುಗಳಿಗೆ ಕಾರಣವಾಗುತ್ತಿವೆ. ಈ ಕುರಿತು ತೀವ್ರ ಕಳವಳ ವ್ಯಕ್ತಪಡಿಸಿದ ಸಚಿವರು, ವಿದ್ಯುತ್ ಕಂಬ ಮತ್ತು ತಂತಿಗಳಿಂದ ಯಾವುದೇ ರೀತಿಯ ಅನಾಹುತ ಸಂಭವಿಸದಂತೆ ತಕ್ಷಣವೇ ಮುನ್ನೆಚ್ಚರಿಕಾ ಕ್ರಮ ಕೈಗೊಂಡು ಸಮಗ್ರ ವರದಿ ಸಲ್ಲಿಸುವಂತೆ ಅಧಿಕಾರಿಗಳಿಗೆ ತಿಳಿಸಿದರು.

ಜಿಲ್ಲೆಯ ಪ್ರತಿಯೊಂದು ಗ್ರಾಮೀಣ ಪ್ರದೇಶಕ್ಕೂ ಬಸ್ ಸಂಚಾರ ಸಮರ್ಪಕವಾಗಿರಬೇಕು. ಯಾವುದೇ ಹಳ್ಳಿಯಿಂದಲೂ ಬಸ್ ಬರುತ್ತಿಲ್ಲ ಎಂಬ ದೂರುಗಳು ಕೇಳಿಬರದಂತೆ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು ಎಂದು ಅವರು ಸೂಚಿಸಿದರು.

ಈ ಸಭೆಯಲ್ಲಿ ಶಾಸಕ ರಹೀಂ ಖಾನ್, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ರಂದೀಪ್ ಡಿ., ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ, ಜಿಲ್ಲಾ ಪಂಚಾಯತ್ ಸಿಇಒ ಗಿರೀಶ್ ಬದೋಲೆ, ಎಸ್ಪಿ ಪ್ರದೀಪ್ ಗುಂಟಿ, ಅಧಿಕಾರಿಗಳು ಉಪಸ್ಥಿತರಿದ್ದರು.

ಬಿಜೆಪಿಗೆ ಅನಿವಾರ್ಯ ಕಾರಣಗಳಿಂದ ರಾಜೀನಾಮೆ; ಹನುಮಗೌಡ ಬೆಳಗುರ್ಕಿ

ನೀರಾವರಿಯಲ್ಲಿ ಮಳೆ ಕೊಯ್ಲು ಮಾಡಿ ಹೊಲಕ್ಕೊಂದು ಕೆರೆ ನಿರ್ಮಿಸಿದಲ್ಲಿ, ಸದರಿ ಕೆರೆಗಳು ರೈತರಿಗೆ ವಿಕೇಂದ್ರಿಕೃತ ಜಲಾಶಯಗಳಾಗುತ್ತವೆ. ಇದರಿಂದ ಸಮಗ್ರ ಕೃಷಿ ಪದ್ಧತಿ ಅಂದರೆ ಕೃಷಿ, ತೋಟಗಾರಿಕೆ, ಹೈನುಗಾರಿಕೆ, ಮೀನುಗಾರಿಕೆ, ಕೋಳಿ ಸಾಕಣೆ, ಕುರಿ ಸಾಕಣೆ ಮುಂತಾದ ಚಟುವಟಿಕೆಗಳು ಸಾಧ್ಯವಾಗುವುದರ ಜೊತೆಗೆ ಕೆರೆ ಬದುಗಳ ಮೇಲೆ ಅರಣ್ಯ ಗಿಡಗಳು, ಹಣ್ಣಿನ ಗಿಡಗಳು ಬೆಳೆಸುವುದರಿಂದ ಪರಿಸರ ಸಂರಕ್ಷಣೆ ಜೊತೆಗೆ ಅಂತರ್ಜಲ ಹೆಚ್ಚಾಗುತ್ತದೆ.

ಬೆಳೆ ಗಂಡಾಂತರಗಳಿಂದ (ನೆರೆ-ಬರ, ನಕಲಿ ಬೀಜ, ಗೊಬ್ಬರ, ಔಷಧಿ) ರಕ್ಷಿಸುವಂತಹ ಬೆಳೆನೀತಿ.

ಬೆಳೆ ಗಂಡಾಂತರಗಳಿಂದ (ಬೆಳೆ ಏರಿಳಿತ) ರಕ್ಷಿಸುವಂತಹ ಬೆಲೆ ನೀತಿಗಳಿಗಾಗಿ ರೈತರು ಹಕ್ಕೊತ್ತಾಯಿಸುತ್ತಿದ್ದಾರೆ.


ಆಲಮಟ್ಟಿ ಜಲಾಶಯದಿಂದ ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ಯೋಜನೆಗಳಿಂದ ಹಿರೇಹಳ್ಳ ಜಲಾಶಯಕ್ಕೆ ಸಂಪರ್ಕ ಕಲ್ಪಿಸಬಹುದಾಗಿದೆ. ಇದರಿಂದ ಆಲಮಟ್ಟಿ-ತುಂಗಭದ್ರಾ ಜೋಡಿಸಿದಂತಾಗುತ್ತದೆ.

ಸಿ.ಆರ್.ಪಾಟೀಲ್ ಜಲಶಕ್ತಿ ಮಂತ್ರಾಲಯದಿಂದ ಕೆಳಗಿನ ಹಂತದ ಅಧಿಕಾರಿಗಳು ತುಂಗಭದ್ರಾ ಹೂಳು ನಿರ್ವಹಣೆ, ನವಲಿ ಜಲಾಶಯದ ಕುರಿತು ಚರ್ಚಿಸಲು ನಿರ್ದೇಶಿಸಲಾಗಿದೆ.

ಈ ಸಂದರ್ಭದಲ್ಲಿ. ರಾಮನಗೌಡ. ಮಲ್ಲೇಶ್ ಗೌಡ. ವೆಂಕನಗೌಡ ಚನ್ನಬಸವ ಅಲಬನೂರು ಸೇರಿದಂತೆ ಇತರರು ಉಪಸ್ಥಿತರಿದ್ದರು.

ನಿಮ್ಮೂರು ಸುದ್ದಿ

ಸಂಪಾದಕೀಯ



ದಿ ಗ್ರೇಟ್ ಹಿಮಾಲಯನ್ ಚಾಲೆಂಜ್: ಹಿಮಪರ್ವತಗಳ ಎಚ್ಚರಿಕೆ ಗಂಟೆಆಲಿಸಿದರೆ ಉಳಿವು, ಕಿವುಡರಾದರೆ ಅಳಿವು!

ನೇಪಾಳದಲ್ಲಿ ನಡೆದ ಈ ದುರಂತವು ಕೇವಲ ಆ ದೇಶಕ್ಕಷ್ಟೇ ಸೀಮಿತವಾದ ಬಿಕ್ಕಟ್ಟಲ್ಲ. ಹಿಮಾಲಯದ ಮಡಿಲಲ್ಲಿರುವ ಭಾರತದ ಉತ್ತರಾಖಂಡ, ಹಿಮಾಚಲ ಪ್ರದೇಶ, ಸಿಕ್ಕಿಂ ಮತ್ತು ಈಶಾನ್ಯ ರಾಜ್ಯಗಳಿಗೂ ಇದು ನೇರ ಎಚ್ಚರಿಕೆಯ ಕರೆಗಂಟೆ. ಗಂಗಾ, ಯಮುನಾ, ಸಿಂಧೂ ಮತ್ತು ಬ್ರಹ್ಮಪುತ್ರ ನದಿಗಳ ಮೂಲಕ ಶತಕೋಟಿ ಜನರಿಗೆ ನೀರು ನೀಡುವ ಹಿಮಾಲಯದ ಸ್ಥಿರತೆ ತಪ್ಪಿದರೆ, ಇಡೀ ದಕ್ಷಿಣ ಏಷ್ಯಾದಲ್ಲಿ ಕುಡಿಯುವ ನೀರು ಮತ್ತು ಆಹಾರ ಭದ್ರತೆಯ ತೀವ್ರ ಅಭಾವ ಎದುರಾಗಲಿದೆ.

ದಕ್ಷಿಣ ಏಷ್ಯಾದ ಪ್ರಮುಖ ಜೀವನಾಡಿ ಮತ್ತು ಶತಕೋಟಿ ಜನರ ತೃಷೆಯನ್ನು ತಣಿಸುವ ವಿಶಾಲ ಹಿಮಭಂಡಾರ ಹಿಮಾಲಯ ಪರ್ವತ ಶ್ರೇಣಿಗಳು. ಪ್ರಕೃತಿಯ ಮಹೋನ್ನತ ಸೌಂದರ್ಯದ ಪ್ರತೀಕವಾದ ಈ ಹಿಮ ಪರ್ವತಗಳಿಂದು ಅತ್ಯಂತ ಕಠಿಣ ಪರಿಸರ ಬಿಕ್ಕಟ್ಟನ್ನು ಎದುರಿಸುತ್ತಿವೆ. ಕಳೆದ ಕೆಲವು ದಶಕಗಳಿಂದ ಮಾನವನ ಅತಿಯಾದ ಹಸ್ತಕ್ಷೇಪ, ಕೈಗಾರಿಕೀಕರಣ ಮತ್ತು ಜಾಗತಿಕ ತಾಪಮಾನದ ಏರಿಕೆಯ ಪರಿಣಾಮ ಒಂದಾದ ಮೇಲೆ ಒಂದರಂತೆ ಜಗತ್ತಿಗೆ ತಟ್ಟುತ್ತಿದೆ. ಈ ಸೂಕ್ಷ್ಮ ಹಿಮಾಲಯ ಪರಿಸರ ವ್ಯವಸ್ಥೆಯ ಸಮತೋಲನ ಸಂಪೂರ್ಣವಾಗಿ ತಪ್ಪುತ್ತಿದೆ.

ಇತ್ತೀಚೆಗೆ ನೇಪಾಳದಲ್ಲಿ ಸಂಭವಿಸಿದ ಪ್ರಳಯಾಂತಕ ಮೇಘಸ್ಫೋಟ, ಹಿಮನದಿ ಕುಸಿತ, ಸರಣಿ ಭೂಕುಸಿತ ಮತ್ತು ಜಲಪ್ರಳಯವು ಕೇವಲ ಒಂದು ತಾತ್ಕಾಲಿಕ ನೈಸರ್ಗಿಕ ವಿಕೋಪವಾಗಿ ಉಳಿದಿಲ್ಲ. ಇದು ಇಡೀ ಮಾನವಕುಲಕ್ಕೆ ಹಿಮಾಲಯ ನೀಡುತ್ತಿರುವ ಗಂಭೀರ ಎಚ್ಚರಿಕೆಯ ಸಂಕೇತ ಎಂಬುದು ಸ್ಪಷ್ಟ.

ಕಠ್ಮಂಡು ಕಣಿವೆ ಸೇರಿದಂತೆ ದಕ್ಷಿಣ ಮತ್ತು ಪೂರ್ವ ನೇಪಾಳದಾದ್ಯಂತ ಸುರಿದ ಭೀಕರ ಮಳೆಯು ಬಾಗ್‌ಮತಿ, ಕೋಸಿ ಮತ್ತು ಗಂಧಕಿ ನದಿಗಳನ್ನು ಕ್ಷಣಾರ್ಧದಲ್ಲಿ ರೌದ್ರಾವತಾರ ತಾಳುವಂತೆ ಮಾಡಿತು. ನೂರಾರು ಅಮಾಯಕ ಜೀವಿಗಳು ಜಲಸಮಾಧಿಯಾದವು, ಕೃಷಿ ಭೂಮಿ, ಸೇತುವೆಗಳು ಹಾಗೂ ಮೂಲಸೌಕರ್ಯಗಳು ನೀರಿನಲ್ಲಿ ಕೊಚ್ಚಿಹೋದವು. ಈ ದುರಂತವು ಪ್ರಕೃತಿಯ ವಿಕೋಪಕ್ಕಿಂತ ಹೆಚ್ಚಾಗಿ ಮಾನವನ ನಿರ್ಲಕ್ಷ್ಯದ ಫಲ ಎಂಬುದು ಕಟು ಸತ್ಯ.

ನೇಪಾಳದಲ್ಲಿ ಭೀಕರ ಪ್ರವಾಹಕ್ಕೆ ಈವರೆಗೆ ಕನಿಷ್ಠ 903 ಮಂದಿ ಪ್ರವಾಹಕ್ಕೆ ಬಲಿಯಾಗಿದ್ದಾರೆ. ನೆರೆಯ ಟಿಬೆಟ್ ಪ್ರಾಂತ್ಯದ 16 ಸಾವುಗಳನ್ನೂ ಒಳಗೊಂಡರೆ ಒಟ್ಟು ಮೃತರ ಸಂಖ್ಯೆ 919 ದಾಟಿದೆ. ನೇಪಾಳವೊಂದರಲ್ಲೇ 4,247 ಕ್ಕೂ ಹೆಚ್ಚು ಜನರು ನಾಪತ್ತೆಯಾಗಿದ್ದಾರೆ. ಇವರಲ್ಲಿ 3,655 ನೇಪಾಳಿ ನಾಗರಿಕರು ಮತ್ತು ಸುಮಾರು 592 ವಿದೇಶಿ ಪ್ರವಾಸಿಗರಿದ್ದಾರೆ. ಭಾರತದ ವಿದೇಶಾಂಗ ಸಚಿವಾಲಯ ಮತ್ತು ನೇಪಾಳದ ಮೂಲಗಳ ಪ್ರಕಾರ, ಕನಿಷ್ಠ 288 ರಿಂದ 320 ಭಾರತೀಯ ಪ್ರಜೆಗಳು ಇನ್ನೂ ನಾಪತ್ತೆಯಾಗಿದ್ದಾರೆ ಅಥವಾ ಸಂಪರ್ಕಕ್ಕೇ ಸಿಗುತ್ತಿಲ್ಲ. ಇವರಲ್ಲಿ ಜಲವಿದ್ಯುತ್ ಯೋಜನೆಯೊಂದರಲ್ಲಿ ಕೆಲಸ ಮಾಡುತ್ತಿದ್ದ 73 ಕಾರ್ಮಿಕರು ಮತ್ತು ಕೈಲಾಶ ಮಾನಸಸರೋವರ ಯಾತ್ರೆ ಹಾಗೂ ಪ್ರವಾಸಕ್ಕೆ ತೆರಳಿದ್ದ ಪ್ರವಾಸಿಗರು ಸೇರಿದ್ದಾರೆ.

ನೇಪಾಳದ ಜಲಪ್ರಳಯದ ಹಿಂದು-ಮುಂದು

ಹಲವು ವರ್ಷಗಳ ಹಿಂದಿನಿಂದಲೇ ತಜ್ಞರು ಎಚ್ಚರಿಕೆ ನೀಡುತ್ತಿದ್ದಂತೆ ಈಗ ಸಂಭವಿಸುತ್ತಿದೆ. ಜಾಗತಿಕ ತಾಪಮಾನ ಏರಿಕೆಯಿಂದಾಗಿ ಹಿಮಾಲಯದ ಹಿಮನದಿಗಳು () ಹಿಂದೆಂದೂ ಇಲ್ಲದಷ್ಟು ವೇಗವಾಗಿ ಕರಗುತ್ತಿವೆ. ಇದರಿಂದಾಗಿ ಪರ್ವತಗಳ ಮೇಲ್ಭಾಗದಲ್ಲಿ ತಾತ್ಕಾಲಿಕ ಹಿಮಸರೋವರಗಳು ನಿರ್ಮಾಣಗೊಂಡಿವೆ. ಅವುಗಳು ನೈಸರ್ಗಿಕ ತಡೆಗೋಡೆಗಳನ್ನು ಒಡೆದುಕೊಂಡು ಒಮ್ಮೆಗೆ ಕೆಳಮುಖವಾಗಿ ಬೃಹತ್ ಪ್ರವಾಹವಾಗಿ ಅಪ್ಪಳಿಸುತ್ತಿವೆ. ಇದರ ಸದ್ದನ್ನು ನಾವು ಆಲಿಸಿ ಇನ್ನು ಮುಂದಾದರೂ ಎಚ್ಚೆತ್ತುಕೊಂಡರೆ ನಮ್ಮ ಉಳಿವು, ಕಿವುಡರಾದರೆ ಅಳಿವು!

ಇನ್ನೊಂದೆಡೆ ಹವಾಮಾನ ಬದಲಾವಣೆಯ ಪರಿಣಾಮವಾಗಿ ಮಾನ್ಸೂನ್ ಮಳೆಯ ಮಾದರಿ ಸಂಪೂರ್ಣ ಬದಲಾಗಿದೆ. ಸಾಧಾರಣವಾಗಿ ತಿಂಗಳುಗಳ ಕಾಲ ಹರಡಬೇಕಾದ ಮಳೆ, ಕೇವಲ ಕೆಲವೇ ಗಂಟೆಗಳಲ್ಲಿ ಮೇಘಸ್ಫೋಟದ ರೂಪದಲ್ಲಿ ಒಂದೇ ಪ್ರದೇಶಕ್ಕೆ ಸುರಿದು ಭೀಕರ ಪ್ರವಾಹವನ್ನು ಸೃಷ್ಟಿಸುತ್ತಿದೆ. ಇವೆಲ್ಲವುದರ ಜತೆಗೆ ಹಿಮಾಲಯದಂತಹ ಸೂಕ್ಷ್ಮ ವಲಯಗಳಲ್ಲಿ ರಸ್ತೆ ಅಗಲೀಕರಣ, ಸುರಂಗ ಮಾರ್ಗಗಳ ನಿರ್ಮಾಣ ಮತ್ತು ಬೃಹತ್ ಜಲವಿದ್ಯುತ್ ಯೋಜನೆಗಳಿಗಾಗಿ ಅತಿಯಾದ ಯಂತ್ರಗಳ ಬಳಕೆ ಪರ್ವತಗಳ ಆಂತರಿಕ ಸ್ಥಿರತೆಯನ್ನು ಸಂಪೂರ್ಣವಾಗಿ ಕುಗ್ಗಿಸಿದೆ. ಪರ್ವತಗಳ ಇಳಿಜಾರುಗಳಲ್ಲಿರುವ ಅರಣ್ಯ ಸಂಪತ್ತನ್ನು ನಾಶಪಡಿಸಿರುವುದರಿಂದ ಮಣ್ಣಿನ ಹಿಡಿತ ತಪ್ಪಿ, ಸಣ್ಣ ಮಳೆಗೂ ಬೃಹತ್ ಪ್ರಮಾಣದ ಭೂಕುಸಿತಗಳು ಸಂಭವಿಸುತ್ತಿವೆ.

ಭಾರತಕ್ಕೆ ಮಾತ್ರವಲ್ಲ ಇಡೀ ವಿಶ್ವಕ್ಕೆ ಎಚ್ಚರಿಕೆಯ ಕರೆಗಂಟೆ

ನೇಪಾಳದಲ್ಲಿ ನಡೆದ ಈ ದುರಂತವು ಕೇವಲ ಆ ದೇಶಕ್ಕಷ್ಟೇ ಸೀಮಿತವಾದ ಬಿಕ್ಕಟ್ಟಲ್ಲ. ಹಿಮಾಲಯದ ಮಡಿಲಲ್ಲಿರುವ ಭಾರತದ ಉತ್ತರಾಖಂಡ, ಹಿಮಾಚಲ ಪ್ರದೇಶ, ಸಿಕ್ಕಿಂ ಮತ್ತು ಈಶಾನ್ಯ ರಾಜ್ಯಗಳಿಗೂ ಇದು ನೇರ ಎಚ್ಚರಿಕೆಯ ಕರೆಗಂಟೆ. ಗಂಗಾ, ಯಮುನಾ, ಸಿಂಧೂ ಮತ್ತು ಬ್ರಹ್ಮಪುತ್ರ ನದಿಗಳ ಮೂಲಕ ಶತಕೋಟಿ ಜನರಿಗೆ ನೀರು ನೀಡುವ ಹಿಮಾಲಯದ ಸ್ಥಿರತೆ ತಪ್ಪಿದರೆ, ಇಡೀ ದಕ್ಷಿಣ ಏಷ್ಯಾದಲ್ಲಿ ಕುಡಿಯುವ ನೀರು ಮತ್ತು ಆಹಾರ ಭದ್ರತೆಯ ತೀವ್ರ ಅಭಾವ ಎದುರಾಗಲಿದೆ.

ಈ ಸಂದರ್ಭದಲ್ಲಿ ಹಿಮಾಲಯದ ಪರಿಸರವನ್ನು ರಕ್ಷಿಸಲು ತಕ್ಷಣದ ಜಾಗತಿಕ ಮತ್ತು ಪ್ರಾದೇಶಿಕ ಕ್ರಮಗಳು ಅಗತ್ಯ. ಪರ್ವತ ಪ್ರದೇಶಗಳಲ್ಲಿ ಯಾವುದೇ ಅಭಿವೃದ್ಧಿ ಯೋಜನೆ ಕೈಗೊಳ್ಳುವ ಮೊದಲು ಕಟ್ಟುನಿಟ್ಟಾದ ಪರಿಸರ ಪ್ರಭಾವ ಮೌಲ್ಯಮಾಪನ () ನಡೆಯಬೇಕಾಗಿದೆ. ಅದರೊಂದಿಗೆ ಹಿಮಸರೋವರಗಳ ಮಟ್ಟವನ್ನು ಉಪಗ್ರಹಗಳ ಮೂಲಕ ಸದಾ ನಿಗಾವಹಿಸಿ ಪ್ರವಾಹದ ಮುನ್ಸೂಚನೆ ನೀಡುವ ತಂತ್ರಜ್ಞಾನವನ್ನು ಬಲಪಡಿಸುವುದು ಅತ್ಯಗತ್ಯ. ಪ್ರಕೃತಿ ನೀಡುತ್ತಿರುವ ಈ ಎಚ್ಚರಿಕೆಯ ಗಂಟೆಯನ್ನು ಆಲಿಸಿ ಈಗಲೇ ಜಾಗೃತರಾದರೆ ಮಾತ್ರ ಜೀವ ಸಂಕುಲದ ಉಳಿವು ಸಾಧ್ಯ, ಇಲ್ಲದಿದ್ದರೆ ಅಳಿವು ನಿಶ್ಚಿತ.

ಸೆ.5ರ ಸಿಜೆಪಿ ಪ್ರತಿಭಟನಾ ಮೆರವಣಿಗೆಗೆ ತಡೆ ನೀಡಲು ಸುಪ್ರೀಂ ಕೋರ್ಟ್ ನಕಾರ

ಕಾಕ್ರೋಚ್ ಜನತಾ ಪಾರ್ಟಿ (ಸಿಜೆಪಿ) ಮುಂಬರುವ ಸೆಪ್ಟೆಂಬರ್ 5ರಂದು ದೆಹಲಿಯಲ್ಲಿ ನಡೆಸಲು ಉದ್ದೇಶಿಸಿರುವ ಬೃಹತ್ ಪ್ರತಿಭಟನಾ ಮೆರವಣಿಗೆಗೆ ಮಧ್ಯಂತರ ತಡೆ ನೀಡಲು ಸುಪ್ರೀಂ ಕೋರ್ಟ್ ಸೋಮವಾರ ನಿರಾಕರಿಸಿದೆ. ಪ್ರತಿಭಟನಾಕಾರರು ಹಾಗೂ ಸುವ್ಯವಸ್ಥೆ ಕಾಯುವ ಸಂಸ್ಥೆಗಳು ಸೇರಿದಂತೆ ಎರಡೂ ಕಡೆಯವರು ಕಾನೂನು ವ್ಯಾಪ್ತಿಯಲ್ಲಿಯೇ ಕಾರ್ಯಾಚರಿಸಬೇಕು ಮತ್ತು ಶಾಂತಿ ಕಾಪಾಡಬೇಕು ಎಂದು ನ್ಯಾಯಾಲಯ ಸ್ಪಷ್ಟಪಡಿಸಿದೆ.

ದೇಶದ ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್, ನ್ಯಾಯಮೂರ್ತಿಗಳಾದ ಜೋಯ್ಮಲ್ಯ ಬಾಗ್ಚಿ ಮತ್ತು ವಿ. ಮೋಹನಾ ಅವರನ್ನೊಳಗೊಂಡ ಪೀಠವು ದೆಹಲಿ ಪೊಲೀಸ್ ಇಲಾಖೆಯ ನಿವೃತ್ತ ಅಧಿಕಾರಿ ರಾಜೇಂದ್ರ ಸಿಂಗ್ ಹಾಗೂ ಇತರರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿತು.

ಸೆಪ್ಟೆಂಬರ್ 12 ಮತ್ತು 13ರಂದು ದೆಹಲಿಯಲ್ಲಿ ನಡೆಯಲಿರುವ ಬ್ರಿಕ್ಸ್ () ಶೃಂಗಸಭೆಯ ಹಿನ್ನೆಲೆಯಲ್ಲಿ ಹಾಗೂ ಭದ್ರತಾ ಸೂಕ್ಷ್ಮ ಪ್ರದೇಶಗಳಲ್ಲಿ ಯಾವುದೇ ಅನುಮತಿ ಇಲ್ಲದೆ ನಡೆಯುವ ಇಂತಹ ಮೆರವಣಿಗೆಗಳಿಗೆ ತಡೆ ನೀಡಬೇಕು ಅಥವಾ ಮುಂದೂಡಬೇಕು ಎಂದು ಅರ್ಜಿದಾರರು ಕೋರಿದ್ದರು.

ಆದರೆ ಈ ಅರ್ಜಿಯನ್ನು ವಜಾಗೊಳಿಸಿದ ಸುಪ್ರೀಂ ಕೋರ್ಟ್, ''ಪ್ರತಿಭಟನೆಯಲ್ಲಿ ಶಾಂತಿಭಂಗ ಉಂಟಾಗುತ್ತದೆ ಎಂದು ಮುಂಚಿತವಾಗಿಯೇ ಊಹಿಸಲು ಯಾವುದೇ ಬಲವಾದ ಕಾರಣಗಳಿಲ್ಲ. ರಾಜಧಾನಿಯಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವುದು ಕೇಂದ್ರ ಸರ್ಕಾರ ಹಾಗೂ ದೆಹಲಿ ಸರ್ಕಾರದ ಕರ್ತವ್ಯವಾಗಿದೆ'' ಎಂದು ತಿಳಿಸಿತು.

ಅಲ್ಲದೆ, ದೂರುದಾರರು ತಮ್ಮ ಮನವಿಗಳನ್ನು ಈ ಹಿಂದೆ ರಚಿಸಲಾದ ಉನ್ನತ ಮಟ್ಟದ ವಿಚಾರಣಾ ಸಮಿತಿಯ () ಮುಂದೆ ಮಂಡಿಸಬಹುದು ಎಂದು ನಿರ್ದೇಶಿಸಿದೆ. ಪರೀಕ್ಷಾ ಅಕ್ರಮ ಹಾಗೂ ವಿದ್ಯಾರ್ಥಿ ಮೇಲಿನ ಪೊಲೀಸ್ ದೌರ್ಜನ್ಯ ಖಂಡಿಸಿ ಸಿಜೆಪಿ ಈ ಮೆರವಣಿಗೆಗೆ ಕರೆ ನೀಡಿದ್ದು, ಸುಪ್ರೀಂ ಕೋರ್ಟ್ ಈ ವಿಷಯದ ಮುಂದಿನ ವಿಚಾರಣೆಯನ್ನು ಸೆಪ್ಟೆಂಬರ್ 10ಕ್ಕೆ ಕಾಯ್ದಿರಿಸಿದೆ.

ವಿದೇಶಿ ದೇಣಿಗೆ ನಿಯಂತ್ರಣ ತಿದ್ದುಪಡಿ ಮಸೂದೆ 2026 ಮಲಗಿದ ಗುಮ್ಮ ಮತ್ತೇಳಬಹುದೇ?

ಭಾರತದ ಸಾವಿರಾರು ಸ್ವಯಂಸೇವಾ ಸಂಸ್ಥೆಗಳು ವಿದೇಶಿ ದೇಣಿಗೆಯನ್ನು ಪಡೆದು ಸಹಸ್ರಾರು ಅಭಿವೃದ್ಧಿ ಕಾರ್ಯಗಳಿಗೆ ಬಳಕೆ ಮಾಡುತ್ತಿವೆ. ಕೋಟ್ಯಂತರ ಕುಟುಂಬಗಳ ಜೀವನ ಮಟ್ಟ ಸುಧಾರಣೆ ಜೊತೆಗೆ, ಸಾರ್ವಜನಿಕ ಸೌಲಭ್ಯಗಳಾದ, ಆಸ್ಪತ್ರೆ, ಶಾಲೆ, ಅನಾಥಾಲಯಗಳು, ಕೃಷಿ ಅಭಿವೃದ್ಧಿ, ಜಲ ಸಂರಕ್ಷಣೆ ಹಾಗೂ ಕುಡಿಯುವ ನೀರಿನ ವ್ಯವಸ್ಥೆಗಳು, ಅರಣ್ಯ ರಕ್ಷಣೆ, ಸಾರಿಗೆ ಮತ್ತು ಸಾಮಾಜಿಕ ಕಲ್ಯಾಣ ಕೆಲಸಗಳಂತಹ ಅಭಿವೃದ್ಧಿ ಕಾರ್ಯಗಳಿಗೆ ಹೆಚ್ಚಿನಂಶ ದೇಣಿಗೆಯು ಬಳಕೆಯಾಗುತ್ತಿದೆ.

ಆಗಸ್ಟ್ 13ರಂದು ಮುಕ್ತಾಯಗೊಂಡ ಮಳೆಗಾಲದ ಅಧಿವೇಶನದಲ್ಲಿ ವಿದೇಶಿ ದೇಣಿಗೆ (ನಿಯಂತ್ರಣ) ತಿದ್ದುಪಡಿ ಮಸೂದೆ 2026ರನ್ನು ಜಾರಿಗೊಳಿಸಲು ತಹತಹಿಸುತ್ತಿದ್ದ ಬಿಜೆಪಿ ಸರ್ಕಾರವು ಅದೇಕೊ ಹೆಚ್ಚಿನ ಹಟವಿಡಿಯದೆ, ಜಂಟಿ ಸಂಸತ್ ಸಮಿತಿಯ ಪರಿಶೀಲನೆಗೆ ಒಪ್ಪಿಸುತ್ತದೆ! ಇದಕ್ಕೆ ಅಮೆರಿಕದ ಒತ್ತಡವಿರಬಹುದೇ ಎಂಬುದು ಹಲವರ ಅನುಮಾನ. ಸದ್ಯಕ್ಕೆ ಸುಮ್ಮನಾದ ಕೇಂದ್ರ ಸರ್ಕಾರವು, ಈ ಕರಡು ಮಸೂದೆಯನ್ನು ಮತ್ತೆ ಬೆನ್ನಿಗೇರಿಸಿಕೊಳ್ಳುವ ಸಾಧ್ಯತೆಗಳು ಹೆಚ್ಚಿದ್ದು, ಈ ಬಗ್ಗೆ ಗಂಭೀರ ಚರ್ಚೆಗಳು ಹೆಚ್ಚು ನಡೆಯಬೇಕಿದೆ.

ಕಾಯ್ದೆಯಲ್ಲಿನ ಲೋಪದೋಷಗಳನ್ನು ಸರಿಪಡಿಸಿ ಪಾರದರ್ಶಕತೆಯನ್ನು ಹೆಚ್ಚಿಸುವುದು ಹಾಗೂ ಅನುಮತಿಸಲಾದ ಉದ್ದೇಶಗಳಿಗೆ ಮಾತ್ರ ದೇಣಿಗೆಯು ಬಳಕೆಯಾಗುವಂತೆ ನಿಯಂತ್ರಿಸಲು ಈ ತಿದ್ದುಪಡಿ ಅಗತ್ಯವೆಂದು ಸರ್ಕಾರದ ವಾದ. ಆದರೆ, ಪ್ರಸ್ತುತದ ಕಾಯ್ದೆಯು ಯಾವುದೇ ದುರುಪಯೋಗಗಳನ್ನು ತಡೆಯುವಂತಹ ಕಠಿಣ ನಿಯಮಗಳನ್ನು ಹೊಂದಿರುವಾಗ ಈ ತಿದ್ದುಪಡಿಯ ಅವಶ್ಯಕತೆ ಇಲ್ಲವೆಂಬುದು ಸ್ವಯಂಸೇವಾ ಸಂಸ್ಥೆಗಳ ಅಭಿಪ್ರಾಯವಾದರೆ, ಕ್ರೈಸ್ತ ಸಂಸ್ಥೆಗಳ ಆತಂಕ ಬೇರೆಯದಾಗಿದೆ; ತಿದ್ದುಪಡಿಯ ಉದ್ದೇಶವು ವಿದೇಶಿ ಹಣವನ್ನು ನಿಯಂತ್ರಿಸುವುದಾಗಿಲ್ಲ, ಬದಲಿಗೆ ಕ್ರಿಶ್ಚಿಯನ್ ಸಂಸ್ಥೆಗಳ ಆಸ್ತಿ ಮತ್ತು ಚಟುವಟಿಕೆಗಳನ್ನು ಸ್ವಾಧೀನಪಡಿಸಿಕೊಳ್ಳುವ ಮೂಲಕ ಕ್ರೈಸ್ತ ಸಮುದಾಯವನ್ನು ಗುರಿಯನ್ನಾಗಿಸುವ ಪ್ರಯತ್ನ ಇದಾಗಿದೆ ಎಂಬ ಆರೋಪ ಅವರದು. ಗೃಹ ಸಚಿವ ಅಮಿತ್ ಶಾ ಅವರು ಈ ಆರೋಪವನ್ನು ಅಲ್ಲಗೆಳೆದು, ಅಂತಹ ಉದ್ದೇಶ ಇಲ್ಲವೆಂದು ಕ್ರಿಶ್ಚಿಯನ್ ಪ್ರತಿನಿಧಿ ಮಂಡಳಿಗೆ ಭರವಸೆ ನೀಡಿರುತ್ತಾರೆ.

ಹಾಗಾದರೆ, ಈ ಮಸೂದೆಯ ನಿಜ ಉದ್ದೇಶವೇನು? ಡಿಎಂಕೆ ರಾಜ್ಯಸಭಾ ಸದಸ್ಯ ಹಾಗೂ ಅಲ್ಪಸಂಖ್ಯಾತರ ಜಂಟಿ ಕ್ರಿಯಾ ಸಮಿತಿ ಅಧ್ಯಕ್ಷರಾದ ಪಿ. ವಿಲ್ಸನ್ ಅವರು ಕರಣ್ ಥಾಪರ್‌ಗೆ ನೀಡಿದ ಸಂದರ್ಶನದಲ್ಲಿ, ''ಈ ತಿದ್ದುಪಡಿ ಪ್ರಜಾಪ್ರಭುತ್ವ ಮತ್ತು ಸಂವಿಧಾನ ವಿರೋಧಿಯಾಗಿದ್ದು, ಯ ಸ್ವರೂಪ ಮತ್ತು ಉದ್ದೇಶವನ್ನೇ ಬದಲಾಯಿಸುತ್ತದೆಂದು ಆರೋಪಿಸಿದ್ದಾರೆ. ವಿದೇಶಿ ದೇಣಿಗೆಯನ್ನು ನಿಯಂತ್ರಿಸುವ ಬದಲಿಗೆ ದೇಣಿಗೆಯಿಂದ ಸೃಷ್ಟಿಯಾದ ದತ್ತಿ ಸಂಸ್ಥೆಗಳ ಆಸ್ತಿಯನ್ನು ಸರ್ಕಾರವು ಸ್ವಾಧೀನಪಡಿಸಿಕೊಳ್ಳುವ ವ್ಯವಸ್ಥೆಯಾಗಿ ರೂಪುಗೊಳ್ಳುತ್ತಿದೆ. ನೋಂದಣಿ ರದ್ದಾದಾಗ ಅಥವಾ ನವೀಕರಣ ಆಗಿರದಿದ್ದರೆ, ವಿಚಾರಣೆಗಳಿಗೆ ಅವಕಾಶ ನೀಡದೆ, ಆ ಸಂಸ್ಥೆಗಳ ಆಸ್ತಿಗಳನ್ನು ಪೂರ್ವಾನ್ವಿತವಾಗಿ ವಶಪಡಿಸಿಕೊಂಡು, ಅದನ್ನು ಮಾರಿ, ಬರುವ ಸಂಪತ್ತನ್ನು ಸರ್ಕಾರಿ ಬೊಕ್ಕಸಕ್ಕೆ ಪಡೆಯುವುದಾಗಿದೆ ಎಂಬುದು ಅವರ ಆಕ್ಷೇಪಣೆ.

ಅಂದರೆ, ವಿದೇಶಿ ದೇಣಿಗೆ ಪಡೆಯುತ್ತಿರುವ ಸಂಸ್ಥೆಗಳ ಲೈಸೆನ್ಸ್ ರದ್ದಾದಲ್ಲಿ, ಅಥವಾ ನವೀಕರಿಸದಿದ್ದಲ್ಲಿ, ಆ ಸಂಸ್ಥೆಯು ಈಗಾಗಲೇ ವಿದೇಶಿ ಹಣದಿಂದ ಸೃಷ್ಟಿಸಿರುವ ಹಿಂದಿನ ಆಸ್ತಿಗಳ ಸಮೇತ (ಸೆಕ್ಷನ್ 16 ಬಿ) ಅದರ ಚಟುವಟಿಕೆಗಳ ಮೇಲಿನ ನಿಯಂತ್ರಣವನ್ನು ಸರ್ಕಾರ ನೇಮಿಸುವ ಪ್ರಾಧಿಕಾರಕ್ಕೆ ನೀಡಲಾಗುತ್ತದೆ. ಪ್ರಾಧಿಕಾರವು ಈ ಆಸ್ತಿಗಳನ್ನು ತನ್ನ ವಶಕ್ಕೆ ಪಡೆದುಕೊಳ್ಳುವ, ಮಾರುವ ಅಥವಾ ಇನ್ನಿತರ ಸಂಸ್ಥೆಗೆ ವರ್ಗಾಯಿಸುವ ವ್ಯಾಪಕ ವಿವೇಚನಾಧಿಕಾರವನ್ನು ಹೊಂದಿದೆ. ಈ ನಿರ್ಧಾರಗಳು ಪಕ್ಷಪಾತವಾಗಿದ್ದಲ್ಲಿ, ಅಂತಹ ಸಂಸ್ಥೆಗಳಿಗೆ ಸೂಕ್ತ ರಕ್ಷಣೆ ಇಲ್ಲವೆನ್ನುವುದು ವಿರೋಧದ ಮೂಲವಾಗಿದೆ.

ಭಾರತದ ಸಾವಿರಾರು ಸ್ವಯಂಸೇವಾ ಸಂಸ್ಥೆಗಳು ವಿದೇಶಿ ದೇಣಿಗೆಯನ್ನು ಪಡೆದು ಸಹಸ್ರಾರು ಅಭಿವೃದ್ಧಿ ಕಾರ್ಯಗಳಿಗೆ ಬಳಕೆ ಮಾಡುತ್ತಿವೆ. ಕೋಟ್ಯಂತರ ಕುಟುಂಬಗಳ ಜೀವನ ಮಟ್ಟ ಸುಧಾರಣೆ ಜೊತೆಗೆ, ಸಾರ್ವಜನಿಕ ಸೌಲಭ್ಯಗಳಾದ, ಆಸ್ಪತ್ರೆ, ಶಾಲೆ, ಅನಾಥಾಲಯಗಳು, ಕೃಷಿ ಅಭಿವೃದ್ಧಿ, ಜಲ ಸಂರಕ್ಷಣೆ ಹಾಗೂ ಕುಡಿಯುವ ನೀರಿನ ವ್ಯವಸ್ಥೆಗಳು, ಅರಣ್ಯ ರಕ್ಷಣೆ, ಸಾರಿಗೆ ಮತ್ತು ಸಾಮಾಜಿಕ ಕಲ್ಯಾಣ ಕೆಲಸಗಳಂತಹ ಅಭಿವೃದ್ಧಿ ಕಾರ್ಯಗಳಿಗೆ ಹೆಚ್ಚಿನಂಶ ದೇಣಿಗೆಯು ಬಳಕೆಯಾಗುತ್ತಿದೆ. ಈ ಚಟುವಟಿಕೆಗಳು ಸರ್ಕಾರದ ಅಭಿವೃದ್ಧಿ ಕಾರ್ಯಗಳಿಗೆ ಪೂರಕವಾಗಿ ನಡೆಯುತ್ತಿದ್ದು, ಸರ್ಕಾರಗಳೂ ಸಹ ಸ್ವಯಂ ಸೇವಾ ಸಂಸ್ಥೆಗಳಿಗೆ ತಮ್ಮ ಅನುದಾನವನ್ನು ಜೋಡಿಸಿ ನೂರಾರು ಅಭಿವೃದ್ಧಿ ಕಾರ್ಯಗಳಿಗೆ ಸಹಕರಿಸುತ್ತಿವೆ. ಪ್ರಸ್ತಾಪಿತ ಮಸೂದೆ ಕಾಯ್ದೆಯಾಗಿ ಜಾರಿಯಾದಲ್ಲಿ, ಈ ಎಲ್ಲಾ ಅಭಿವೃದ್ಧಿ ಕಾರ್ಯಗಳು ಸ್ಥಗಿತಗೊಂಡು ಕೋಟ್ಯಂತರ ಕುಟುಂಬಗಳಿಗೆ ಅನ್ಯಾಯವಾಗಲಿದೆ.

ಮೊದಲಿಗೆ, 1976ರಲ್ಲಿ ಜಾರಿಯಾದ ಈ ಕಾಯ್ದೆ, 1984ರಲ್ಲಿ ವಿದೇಶಿ ಹಣ ಪಡೆಯುವ ಸಂಸ್ಥೆಗಳ ನೋಂದಣಿಯನ್ನು ಕಡ್ಡಾಯಗೊಳಿಸಲಾಯಿತು. ನಂತರ, ಇದು ರದ್ದಾಗಿ 2010ರ ಕಾಯ್ದೆ ಜಾರಿಗೊಂಡು, ರಾಷ್ಟ್ರೀಯ ಭದ್ರತೆ, ದೇಶದ ಸಾರ್ವಭೌಮತೆಯ ರಕ್ಷಣೆಗಾಗಿ ಅವಶ್ಯಕ ನಿಯಮಗಳು ಆಗಲೇ ಸೇರ್ಪಡೆಗೊಳ್ಳುತ್ತವೆ. ವಿದೇಶಿ ದೇಣಿಗೆ ಪಡೆಯಲು ಗೃಹ ಇಲಾಖೆಯು ತನ್ನ ಬೇಹುಗಾರಿಕೆ ಹಾಗೂ ಪೊಲೀಸ್ ಇಲಾಖೆಗಳ ಮೂಲಕ ಅರ್ಜಿ ಸಲ್ಲಿಸಿದ ಸಂಸ್ಥೆಯನ್ನು ಬಹು ಆಳವಾಗಿ ಪರಿಶೀಲಿಸಿ ಲೈಸೆನ್ಸ್ ನೀಡುತ್ತದೆ. ಇದಲ್ಲದೆ, ನವೀಕರಣದ ಅವಧಿಯ ನಿಗದಿ, ದೇಣಿಗೆ ದುರುಪಯೋಗವಾದಲ್ಲಿ ಐದು ವರ್ಷ ಕಠಿಣ ಸಜೆ, ಇತರೆ ಸಂಸ್ಥೆಗಳಿಗೆ ದೇಣಿಗೆ ವರ್ಗಾವಣೆ ನಿಷೇಧ, ಪ್ರತ್ಯೇಕ ಬ್ಯಾಂಕ್ ಖಾತೆಯಲ್ಲಿ ನಿರ್ವಹಣೆ, ಕಡ್ಡಾಯ ಲೆಕ್ಕಪತ್ರ ಪರಿಶೋಧನೆ, ರದ್ದು/ಸ್ಥಗಿತವಾದ ಸಂಸ್ಥೆಯ ದೇಣಿಗೆಯ ನಿರ್ವಹಣೆ ಇತ್ಯಾದಿ ನಿಯಮಗಳೊಂದಿಗೆ ಈ ಕಾಯ್ದೆಯು ಬಿಗಿಗೊಳ್ಳುತ್ತದೆ.

ನಂತರ, 2015ರಿಂದ 2019ರ ಅವಧಿಯಲ್ಲಿ ನಿಯಂತ್ರಣ ಮತ್ತು ಅನುಸರಣಾ ನಿಯಮಗಳು ಇನ್ನಷ್ಟು ಸೇರಿಕೊಳ್ಳುವುದಲ್ಲದೆ, ಕಾಯ್ದೆಯು 2020ರಲ್ಲಿ ಮತ್ತೆ ತಿದ್ದುಪಡಿಯಾಗುತ್ತದೆ. ವಾರ್ಷಿಕ ಲೆಕ್ಕಪತ್ರ ಹಾಗೂ ಆಡಿಟ್ ವರದಿ ಸಲ್ಲಿಕೆ, ತ್ರೈಮಾಸಿಕ ದೇಣಿಗೆ ವರದಿಯನ್ನು ವೆಬ್‌ಸೈಟ್/ಪೋರ್ಟಲ್‌ನಲ್ಲಿ ಕಾಣಿಸುವುದು, ದೇಣಿಗೆ ಉದ್ದೇಶವನ್ನು ನಲ್ಲಿ ಸಲ್ಲಿಸುವುದು, ಅನುಮತಿಸಿರುವ ಉದ್ದೇಶಗಳಿಗೆ ಮಾತ್ರ ಬಳಕೆ, ಎರಡು ವರ್ಷದಲ್ಲಿ ಕನಿಷ್ಠ ಹತ್ತು ಲಕ್ಷಗಳು ಖರ್ಚಾಗಿದ್ದರೆ ಮಾತ್ರ ನವೀಕರಣ, ದೇಣಿಗೆ ಸ್ವಿಕಾರಕ್ಕೆ ದೆಹಲಿಯ ಎಸ್.ಬಿ.ಐ. ಬ್ಯಾಂಕಿನಲ್ಲಿ ಖಾತೆ ತೆರೆಯುವುದು, ಚಟುವಟಿಕೆವಾರು ಹಣ ಬಳಕೆ ವರದಿ ಸಲ್ಲಿಕೆ ಸೇರಿದಂತೆ ಇನ್ನೂ ಅನೇಕ ನಿಯಮಗಳನ್ನು ಒಳಗೊಂಡಿದೆ.



ಈ ಕ್ರಮಗಳಿಂದಾಗಿ ವಿದೇಶಿ ದೇಣಿಗೆ ಪಡೆಯುವಾಗಿನ ನಿಯಮಗಳು ಅಗತ್ಯಕ್ಕಿಂತ ಹೆಚ್ಚು ಕಠಿಣಗೊಂಡು, ಯಾವುದೇ ರೀತಿಯ ದುರುಪಯೋಗದ ಜಾಡನ್ನು ಸರ್ಕಾರ ಸುಲಭವಾಗಿ ಗುರುತಿಸಬಹುದಾಗಿದೆ. ಆದರೆ, ಯಾವ ಮಾನದಂಡಗಳ ಆಧಾರದಲ್ಲಿ ಅಧಿಕಾರಿಗಳು ಅನುಮತಿಯನ್ನು ರದ್ದತಿಗೊಳಿಸಲು ಅಥವಾ ನವೀಕರಣ ಮಾಡದಿರುವ ನಿರ್ಧಾರ ಮಾಡುತ್ತಾರೆಂದು ಅರ್ಥಮಾಡಿಕೊಳ್ಳುವುದೇ ಕಷ್ಟವಾಗಿದೆ ಎನ್ನುತ್ತಾರೆ ಪಿ.ವಿಲ್ಸನ್.

ಒಟ್ಟು 52176 ಸಂಸ್ಥೆಗಳು ಹೊಂದಿದ್ದು, ಅವುಗಳಲ್ಲಿ ಕೇವಲ 27.7% (14451) ಮಾತ್ರ ಈಗ ಚಾಲ್ತಿಯಲ್ಲಿವೆ. ಉಳಿದ 22,493 ಸಂಸ್ಥೆಗಳನ್ನು ರದ್ದುಗೊಳಿಸಿರುವ ಹಾಗೂ 15232 ಸಂಸ್ಥೆಗಳನ್ನು ನಿಷ್ಕ್ರೀಯವೆಂದು ಪರಿಗಣಿಸಿರುವ ಮಾಹಿತಿಯನ್ನು ಗೃಹ ಸಚಿವಾಲಯದ ಆನ್‌ಲೈನ್ ಪುಟದಲ್ಲಿ ತಿಳಿಸಲಾಗಿದೆ. ಈ ಪ್ರಮಾಣದ ನೋಂದಣಿಗಳು ರದ್ದಾಗಲು ಕಾರಣಗಳೇನು ಎಂದು ಸಂಸತ್ತಿನಲ್ಲಿ ಕೇಳಿದ ಪ್ರಶ್ನೆಗೆ, ಉತ್ತರವಾಗಿ, ಹೆಚ್ಚಿನ ನೋಂದಣಿಗಳು ಕಾರ್ಯವಿಧಾನಾತ್ಮಕ ಲೋಪಗಳಿಂದ (ಪ್ರೊಸೀಜರಲ್ ಲ್ಯಾಪ್ಸ್) ರದ್ದಾಗಿವೆ ಎಂದು ಗೃಹ ಸಚಿವಾಲಯ ತಿಳಿಸಿತ್ತು. ಈ ರದ್ದತಿಗಳು 2017ರ ನಂತರದಿಂದ ಜರುಗಿದ್ದಾಗಿವೆ ಎಂಬುದು ಗಮನಾರ್ಹವಾಗಿದೆ.

ಇಷ್ಟೆಲ್ಲಾ ಬಿಗಿಗೊಳಿಸಿರುವ ಈ ಕಾಯ್ದೆಯನ್ನು ಮತ್ತೆಷ್ಟು ಬಿಗಿಗೊಳಿಸಬೇಕಿದೆ? ವಿದೇಶಿ ಹಸ್ತ, ವಿದೇಶಿ ಪ್ರಭಾವ ಎನ್ನುವ ಹಳೆಯ ರಾಗವನ್ನೇ ಹಾಡುತ್ತಿದೆ ಈ ಸರ್ಕಾರ. ಹಿಂದಿನ ಸರ್ಕಾರಗಳೂ ಸಹ ಇಂತಹುದೇ ಆರೋಪಗಳನ್ನು ಮಾಡಿದ್ದರೂ, ಕಳೆದ ದಶಕದಿಂದ ಈ ಆರೋಪಗಳ ಸುರಿಮಳೆ ಎಗ್ಗಿಲ್ಲದೆ ನಡೆದಿದೆ; ಸರ್ಕಾರದ ನಿಲುವನ್ನು ಪ್ರಶ್ನಿಸಿದ ನಾಗರಿಕರು, ರೈತರು, ವಿದ್ಯಾರ್ಥಿಗಳು, ಪತ್ರಕರ್ತರು ಹೀಗೆ ಎಲ್ಲರೂ ವಿದೇಶಿ ಹಣ ಮತ್ತು ಸಂಪರ್ಕ ಹೊಂದಿರುವ ತಾಲಿಬಾನಿಗಳು, ಖಲಿಸ್ತಾನಿಗಳು, ಮತ್ತು ನಗರ (ದಿಮಾಗಿ) ನಕ್ಸಲೀಯರೆಂಬ ಪುರಾವೆ ರಹಿತ ಆರೋಪಗಳು! ಈಗ, ಕ್ರೈಸ್ತ ಸಂಸ್ಥೆಗಳು ಹಣ ಬಳಸಿ ಮತಾಂತರ ಮಾಡುತ್ತಿವೆ ಎಂಬ ಮತ್ತೊಂದು ಆರೋಪ!!

ರದ್ದಾಗಿರುವ ಒಟ್ಟು ಸಂಸ್ಥೆಗಳಲ್ಲಿ, 90% ಕ್ರಿಶ್ಚಿಯನ್ ಸಂಸ್ಥೆಗಳಾಗಿದ್ದು, ಇದು ಮುಖ್ಯವಾಗಿ ಕ್ರೈಸ್ತ ಮಿಷನರಿಗಳಿಗೆ ಸೇರಿದ ಆಸ್ತಿಯನ್ನು ಸ್ವಾಧೀನಪಡಿಸಿಕೊಳ್ಳುವ ಉದ್ದೇಶವನ್ನು ಸೂಚಿಸುತ್ತದೆ ಎನ್ನುತ್ತಾರೆ ಪಿ.ವಿಲ್ಸನ್. ಕೇಂದ್ರ ಗೃಹ ವ್ಯವಹಾರಗಳ ರಾಜ್ಯ ಸಚಿವರಾದ ನಿತ್ಯಾನಂದ ರೈ ಅವರು ಲೋಕಸಭೆಯಲ್ಲಿ ಈ ತಿದ್ದುಪಡಿ ಯಾವುದೇ ಸ್ವಯಂಸೇವಾ ಸಂಸ್ಥೆಗಳ ವಿರುದ್ಧವಾಗಿಲ್ಲ, ಬದಲಿಗೆ ವಿದೇಶಿ ದೇಣಿಗೆ ಬಳಕೆಯಲ್ಲಿ ಪಾರದರ್ಶಕತೆ ತಂದು, ಅದರ ದುರುಪಯೋಗ ತಡೆಯುವ ಉದ್ದೇಶ ಹೊಂದಿದೆ, ದೇಣಿಗೆಯನ್ನು ಬಳಸಿ ಬಲವಂತದ ಮತಾಂತರ ನಡೆಸುವವರ ವಿರುದ್ಧ ಈ ಕಾಯ್ದೆಯನ್ನು ಪ್ರಯೋಗಿಸಲಾಗುವುದು ಎಂದು ಹೇಳಿರುತ್ತಾರೆ. ಆದರೆ, ಇಂತಹ ಬಳಕೆಯನ್ನು ಕಾಯ್ದೆಯು ಈಗಾಗಲೇ ನಿಷೇಧಿಸಿರುವಾಗ, ಈ ಹೊಸ ತಿದ್ದುಪಡಿಯ ಅಗತ್ಯತೆ ಅರ್ಥವಾಗುತ್ತಿಲ್ಲ.

ವಿದೇಶಿ ಹಣವು ಬಲವಂತದ ಮತಾಂತರಕ್ಕೆ ಬಳಕೆಯಾಗುತ್ತಿದೆ ಎನ್ನುವುದಕ್ಕಿಂತ, ಕೆಲವು ಸಂಸ್ಥೆಗಳ ಪದಾಧಿಕಾರಿ ಹಾಗೂ ಸಿಬ್ಬಂದಿಯು ವಿದೇಶಿ ದೇಣಿಗೆಯನ್ನು ತಮ್ಮ ಸ್ವಂತ ಲಾಭಕ್ಕೆ ದುರುಪಯೋಗ ಮಾಡಿಕೊಳ್ಳುತ್ತಿರುವ ಸಾಧ್ಯತೆಗಳಿರಬಹುದು. ಆದರೆ, ಇದನ್ನು ಕೇವಲ ಕ್ರಿಶ್ಚಿಯನ್ ಸಂಸ್ಥೆಗಳಷ್ಟೇ ಮಾಡುತ್ತಿವೆ ಎನ್ನಲಾಗದು.

ಅಂತೆಯೇ, ದುರುಪಯೋಗ ಮಾಡುತ್ತಿರುವ ಎಲ್ಲರೂ ದೇಶದ್ರೋಹಿ ಚಟುವಟಿಕೆಗಳಿಗೆ ಅಂದರೆ ಭಯೋತ್ಪಾದನೆ, ನಕ್ಸಲ್, ಮತೀಯ ದ್ವೇಷ, ಆಂತರಿಕ ಶಾಂತಿಗೆ ಧಕ್ಕೆ ಇತ್ಯಾದಿಗಳಿಗೆ ವಿದೇಶಿ ದೇಣಿಗೆ ಬಳಕೆ ಮಾಡುತ್ತಾರೆ ಎನ್ನುವುದೂ ಸಹ ತಪ್ಪಾಗುತ್ತದೆ. ಈ ಗಂಭೀರ ಅಪರಾಧಗಳಲ್ಲಿ ಬೆರಳೆಣಿಕೆಯಷ್ಟು ಸಂಸ್ಥೆಗಳು ಮಾತ್ರ ತೊಡಗಿರಬಹುದು. ಇಸ್ಲಾಂ ಮತ್ತು ಹಿಂದುತ್ವ ಮತೀಯವಾದಿಗಳು ಅಥವಾ ಖಲಿಸ್ತಾನಿಗಳು ವಿದೇಶಿ ಸಹಾಯದಿಂದ ಆಂತರಿಕ ಸಮಸ್ಯೆ ಸೃಷ್ಟಿಸಿದ ಬಗ್ಗೆ ಆರೋಪಗಳು ಈ ಹಿಂದೆ ಕೇಳಿಬಂದಿದ್ದು, ಈಗಲೂ ಅದು ನಡೆಯುತ್ತಿರಬಹುದು. ಆದರೆ ಯಡಿ ಪಡೆದ ದೇಣಿಗೆಯಿಂದಲೇ ಈ ದೇಶದ್ರೋಹಿ ಅಪರಾಧಗಳು ನಡೆದವು ಎನ್ನುವುದಕ್ಕೆ ಸಾಕ್ಷಿಗಳಿಲ್ಲ. ಇಂತಹ ದೇಶದ್ರೋಹಿ ಪ್ರಕರಣಗಳನ್ನು ಶೋಧಿಸಿ ಕಠಿಣ ದಂಡನೆಗೆ ಗುರಿಪಡಿಸುವ ಬದಲು, ಸಣ್ಣ ಪುಟ್ಟ ಕಾರ್ಯವಿಧಾನಾತ್ಮಕ ತಪ್ಪುಗಳಿಗೂ ಲೈಸೆನ್ಸ್ ರದ್ದುಗೊಳಿಸುವ ಅಥವಾ ನವೀಕರಿಸದ ಕ್ರಮದ ಬದಲು, ಸರಿಪಡಿಸಿಕೊಳ್ಳಲು ಅವಕಾಶ ನೀಡುವುದು ವಿವೇಚನೆಯ ನೀತಿಯಾಗಿದೆ. ಇಲ್ಲವಾದಲ್ಲಿ, ಬುಟ್ಟಿಯಲ್ಲಿನ ನೂರು ಹಣ್ಣುಗಳಲ್ಲಿ ಕೊಳೆತ ಹತ್ತನ್ನು ಹೆಕ್ಕಿ ಬಿಸಾಡುವ ಬದಲು ಎಲ್ಲವೂ ಕೊಳೆತಿವೆಯೆಂದು ಬಿಸಾಡಿದಂತಾಗುತ್ತದೆ.

ಕಾಲಕಾಲಕ್ಕೆ ಆಗುತ್ತಿರುವ ಈ ಕಾಯ್ದೆಯ ಬದಲಾವಣೆಗಳನ್ನು ಅರ್ಥ ಮಾಡಿಕೊಂಡು, ಅದಕ್ಕೆ ತಕ್ಕಂತೆ ತಮ್ಮ ವ್ಯವಸ್ಥೆಯಲ್ಲಿ ಬದಲಾವಣೆ ಮಾಡಿಕೊಳ್ಳುವ ಪ್ರಕ್ರಿಯೆಯಲ್ಲಿಯೇ ಅನೇಕ ಸಂಸ್ಥೆಗಳು ಸಕಾಲದಲ್ಲಿ ವರದಿಗಳನ್ನು ಸಲ್ಲಿಸಲಾಗದೆ ತಮ್ಮ ಲೈಸೆನ್ಸ್ ಗಳನ್ನು ಕಳೆದುಕೊಂಡಿದ್ದಾರೆ. ಎಲ್ಲಾ ಸಂಸ್ಥೆಗಳು ನಿರಂತರವಾಗಿ ದೇಣಿಗೆ ಪಡೆಯಲು ಸಾಧ್ಯವಿಲ್ಲ, ಕೆಲವೊಮ್ಮೆ ದೇಣಿಗೆ ಸಿಗುತ್ತದೆ, ಇಲ್ಲವಾದರೆ ಇಲ್ಲ. ಅಥವಾ, ಧೀರ್ಘ ಕಾಲದಿಂದ ನಿಂತಿರುವ ದೇಣಿಗೆ ಮತ್ತೆಂದಾದರೂ ಮುಂದುವರೆಯಬಹುದು. ಆದರೆ, ಎರಡು ವರ್ಷದಲ್ಲಿ ಕನಿಷ್ಠ 10 ಲಕ್ಷ ಹಣವನ್ನು ಖರ್ಚು ಮಾಡಲು ಸಾಧ್ಯವಾಗದ ಸಣ್ಣ ಸಂಸ್ಥೆಗಳ ಅನುಮತಿ ನವೀಕರಣಗೊಳ್ಳುವುದಿಲ್ಲ. ಇಂತಹ ವಾಸ್ತವತೆಗಳನ್ನು ಪುನರ್ ಪರಿಶೀಲಿಸಿ, ನಾಗರಿಕ ಸಂಸ್ಥೆಗಳು ನಡೆಸುತ್ತಿರುವ ಅಭಿವೃದ್ಧಿ ಕಾರ್ಯಗಳಿಗೆ ಸರ್ಕಾರ ಪೂರಕ ನೀತಿಯನ್ನು ತರುವುದು ಮುಖ್ಯವಾಗಿದೆ.

ವಿದೇಶಿ ಹಣ ನಿಂತಿದ್ದರೂ, ಈ ಮೊದಲೇ ಕಟ್ಟಿರುವ ಶಾಲೆ, ಆಸ್ಪತ್ರೆ, ವಸತಿ ನಿಲಯ, ತರಬೇತಿ ಕೇಂದ್ರ ಇತ್ಯಾದಿಗಳು ಸ್ಥಳೀಯ ದೇಣಿಗೆ ಸಹಾಯದಿಂದ ಈಗಲೂ ನಡೆಯುತ್ತಿವೆ. ಹೆಚ್ಚಿನಂಶ, ಈ ಸೇವೆಗಳನ್ನು ಹಿಂದುಳಿದ /ಮೂಲೆಗುಂಪಾದ ಪ್ರದೇಶದ ಜನರು ಮತ್ತು ಹೆಚ್ಚಿನ ಬಹು-ಸಂಖ್ಯಾತರು ಪಡೆದುಕೊಳ್ಳುತ್ತಿದ್ದಾರೆ. ಮೂಲಭೂತ ಸೇವೆಗಳನ್ನೇ ಸರಿಯಾಗಿ ಒದಗಿಸಲಾಗದ ಈ ಸರ್ಕಾರವು, ಸ್ವಯಂಸೇವಾ ಸಂಸ್ಥೆಗಳು ನಡೆಸುವ ಶಾಲೆ, ಆಸ್ಪತ್ರೆ, ಅನಾಥಾಲಯಗಳನ್ನು ತನ್ನ ಸ್ವಾಧೀನಕ್ಕೆ ಪಡೆದು ಪರಿಣಾಮಕಾರಿಯಾಗಿ ನಡೆಸಲಿದೆಯೇ? ಈಗಾಗಲೇ ಸುಮಾರು 95,000ಕ್ಕೂ ಹೆಚ್ಚು ಸರ್ಕಾರಿ ಶಾಲೆಗಳನ್ನು ಮುಚ್ಚಿರುವ ಸರ್ಕಾರವು, ತನ್ನ ಶಾಲೆ, ಆಸ್ಪತ್ರೆ, ವಸತಿ ನಿಲಯಗಳ ನಿರ್ವಹಣಾ ದುಃಸ್ಥಿತಿಯನ್ನು ಸಾಮಾಜಿಕ ಜಾಲತಾಣಗಳಲ್ಲಿ ಕಾಣಬಹುದಾಗಿದೆ.

ಕಬ್ಬಿಣದ ಕಡಲೆಯಾಗಿರುವ ಪ್ರಸ್ತುತದ ಕಾಯ್ದೆಯನ್ನು ಬಳಸಿ ದೇಶದ್ರೋಹಕ್ಕೆ ಅಥವಾ ಸ್ವಂತಕ್ಕೆ ದುರುಪಯೋಗವಾಗುವ ಪ್ರಕರಣಗಳನ್ನು ಪತ್ತೆ ಮಾಡಲು ಸರ್ಕಾರಕ್ಕೆ ಕಷ್ಟವೇನಿಲ್ಲ. ಆದರೆ, ಸಾಬೀತಾಗದ ಆರೋಪಗಳ ಆಧಾರದಲ್ಲಿ ಕಾನೂನು ಬದಲಾವಣೆ ಮಾಡುವುದು ಸಮಸ್ಯೆಗೆ ಪರಿಹಾರವಲ್ಲ, ಬದಲಿಗೆ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದು ಸರ್ಕಾರದ ಜವಾಬ್ದಾರಿಯಾಗಿದೆ. ಈ ಕರಡು ಮಸೂದೆಯು ಜಾರಿಗೊಂಡರೆ, ಈಗಾಗಲೇ ಲೈಸೆನ್ಸ್ ರದ್ದಾಗಿರುವ ಅಥವಾ ನವೀಕರಣಗೊಳ್ಳದ ಸಂಸ್ಥೆಗಳ ಹಿಂದಿನ ಆಸ್ತಿಯನ್ನು ಸೇರಿಸಿ, ಅದರ ಚಟುವಟಿಕೆಗಳನ್ನು ಸರ್ಕಾರವು ಸ್ವಾಧೀನಪಡಿಸಿಕೊಂಡಲ್ಲಿ, ಆ ಸೇವೆಗಳನ್ನು ಅವಲಂಬಿಸಿರುವ ಬಡವರು ವಂಚಿತರಾಗುತ್ತಾರೆ. ಸರ್ಕಾರವು ಹೊಸ ಕಾಯ್ದೆಯನ್ನು ಹಿಂದಿನ ಆಸ್ತಿಗಳಿಗೆ ಅನ್ವಯಿಸುವುದಿಲ್ಲವೆಂದು ಮೌಖಿಕವಾಗಿ ಹೇಳಿದೆ ಸರಿ. ಕರಡು ಮಸೂದೆಯಲ್ಲಿ ಯಾವ ಸಮಯದಿಂದ ಈ ನಿಯಮ ಅನ್ವಯಗೊಳ್ಳುತ್ತದೆ ಎಂದು ಸ್ಪಷ್ಟಪಡಿಸಿಲ್ಲದ ಕಾರಣ ಅದು ವಿದೇಶಿ ಹಣ ಬಳಸಿ ಸೃಷ್ಟಿಸಿದ ಎಲ್ಲಾ ಆಸ್ತಿಗಳಿಗೂ ಪೂರ್ವಾನ್ವಿತವಾಗಿ ಅನ್ವಯಗೊಳ್ಳುವ ಆತಂಕವನ್ನು ತಳ್ಳಿಹಾಕುವಂತಿಲ್ಲ ಎನ್ನಲಾಗಿದೆ.

ಇದನ್ನೂ ಓದಿ ಜಗತ್ತಿನಲ್ಲಿರುವ ಕಪ್ಪು ಹಣದಿಂದ ವಿಶ್ವದ ಎಲ್ಲರಿಗೂ ಲ್ಯಾಪ್‌ಟಾಪ್ ಖರೀದಿಸಬಹುದು: ಸಿಜೆಐ ಸೂರ್ಯಕಾಂತ್

ಶೇ.70 ಕ್ಕೂ ಹೆಚ್ಚು ಅನುಮತಿಗಳು ರದ್ದು ಅಥವಾ ಸ್ಥಗಿತವಾಗಿರುವ ಸಂಸ್ಥೆಗಳ ಆಸ್ತಿಯನ್ನು ಮುಟುಗೋಲು ಹಾಕಿಕೊಂಡು, ಸರ್ಕಾರ ತನಗೆ ಬೇಕಾದವರಿಗೆ ಮಾರಲು ಈ ಮಸೂದೆಯ ಮಾರ್ಗ ಹಿಡಿಯಲಾಗಿದೆಯೇ ಎಂಬ ಅನುಮಾನಗಳು ವ್ಯಕ್ತವಾಗಿವೆ. ಈ ಸಂದರ್ಭದಲ್ಲಿ ಅಮೆರಿಕದ ರಿಪಬ್ಲಿಕನ್ ಕಾಂಗ್ರೆಸ್ ಸದಸ್ಯ ರಿಲೇ ಮೂರ್ ಅವರು ಈ ಮಸೂದೆಯು ಭಾರತದ ಕ್ರೈಸ್ತ ಸಮುದಾಯ ಮೇಲಿನ ಆಕ್ರಮಣ ಮಾತ್ರವಲ್ಲ: ಇದು ಎರಡೂ ದೇಶಗಳ ನಡುವಿನ ಸಂಬಂಧಗಳಲ್ಲಿ ಸಮಸ್ಯೆ ತರಬಹುದು'' ಎಂದಿದ್ದಾರೆ. ಎಂದಿಗೂ ತನ್ನದೇ ಹಟವನ್ನು ಸಾಧಿಸುವ ಬಿಜೆಪಿ ಸರ್ಕಾರವು ಈ ಮಸೂದೆಯ ಜಾರಿಗೆ ಮೊಂಡು ಹಿಡಿಯದೆ, ಜಂಟಿ ಸಂಸದೀಯ ಸಮಿತಿ ಚರ್ಚೆಗೆ ನೀಡಿದ್ದು ಅಮೆರಿಕದ ಒತ್ತಡದಿಂದಲೇ ಎಂಬ ಅನುಮಾನಗಳು ವ್ಯಕ್ತವಾಗಿವೆ. ಏನೇ ಆದರೂ, ಸ್ವಯಂಸೇವಾ ಸಂಸ್ಥೆಗಳೂ ಸಹ ತಾವು ಪಡೆಯುವ ವಿದೇಶಿ ಹಣದ ನಿರ್ವಹಣೆಯನ್ನು ನಿಯಮಾನುಸಾರ ಹಾಗೂ ಸಂಪೂರ್ಣ ಪಾರದರ್ಶಕತೆಯಿಂದ ನಿರ್ವಹಿಸುವ ಜವಾಬ್ದಾರಿ ಹೊಂದಬೇಕಿದೆ.

ಸದ್ಯಕ್ಕೆ ಹಿನ್ನೆಲೆಗೆ ಸರಿದಿರುವ ಈ ಕರಡು ಮಸೂದೆಯು ಮತ್ತೆ ಜಾಗೃತಗೊಳ್ಳುವ ಸಾಧ್ಯತೆಗಳನ್ನು ನಿರಾಕರಿಸುವಂತಿಲ್ಲ. ವಿದೇಶಿ ಹಣದ ಮೇಲಿನ ನಿಯಂತ್ರಣ ಅಗತ್ಯವಿದೆಯೇ ಎಂಬುದು ದೇಶದ ಮುಂದಿರುವ ಪ್ರಶ್ನೆಯಲ್ಲ. ಅದು ಖಂಡಿತಾ ಅಗತ್ಯವಿದೆ. ಆದರೆ, ಈ ಕಾಯ್ದೆಯು ವಿದೇಶಿ ದೇಣಿಗೆ ಪಡೆಯುವ ಸಂಸ್ಥೆಗಳ ಆಸ್ತಿ ಮತ್ತು ಚಟುವಟಿಕೆಗಳನ್ನೂ ಸಹ ನಿಯಂತ್ರಿಸುವ ಅಧಿಕಾರವನ್ನು ಸರ್ಕಾರಕ್ಕೆ ನೀಡಬೇಕೇ ಎಂಬುದೇ ಮುಖ್ಯ ಪ್ರಶ್ನೆಯಾಗಿದೆ.

ಪತ್ರಿಕೆ ಓದುವ ಹವ್ಯಾಸ ಬೆಳಸಿಕೊಳ್ಳಿ

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR